

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 Issue : 69 Tuesday 19-11-2024 E-mail : maruti.b.hosamani76@gmail.com Page: 4 Price : Rs. 1/-

## "ಶರಣರ ಶಕ್ತಿ" ಚಲನಚಿತ್ರ ನ. 22 ಕ್ಕೆ ರಾಜ್ಯಾದ್ಯಂತ ಬಿಡುಗಡೆ



**ಸಿಹಿ ಕಹಿ ಸುದ್ದಿ,**
**ಹುಬ್ಬಳ್ಳಿ :** ಶ್ರೀಶಾ ಫಿಲ್ಮ್ ಹುಬ್ಬಳ್ಳಿ ಅರ್ಪಿಸುವ 'ಶರಣರ ಶಕ್ತಿ' ತಡಿವ್ಯಾರ ನೋಡು ! – ಭಕ್ತಿ ಪ್ರಧಾನ ಕನ್ನಡ ಚಲನ ಚಿತ್ರ ಇದೆ ನ. 22 ಕ್ಕೆ ರಾಜ್ಯಾದ್ಯಂತ ಬಿಡುಗ–ಡೆ ಆಗಲಿದೆ ಎಂದು ನಿರ್ದೇಶಕ ದಿಲೀಪ ಶರ್ಮ ಹೇಳಿದರು. ಹುಬ್ಬಳ್ಳಿಯಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು ಉತ್ತರ ಕರ್ನಾಟಕದ ಕಲಾವಿದರು, ತಂತ್ರಜ್ಞರು, ನಿರ್ಮಾಪಕರು ನಿರ್ಮಿಸಿ ನಿರ್ದೇಶಿಸಿರುವ ಸಂಪೂರ್ಣ ಉತ್ತರ ಕರ್ನಾಟಕದ 140 ಕ್ಕೂ ಮಿಕ್ಕಿ ಕಲಾವಿದರೇ ಇರುವ ಚಿತ್ರವಾಗಿದೆ. ವಿಶ್ವ ಗುರು ಬಸವಣ್ಣ ಹಾಗೂ ಚಿನ್ಮಯಿಜ್ಞಾನಿ ಚನ್ನಬಸವಣ್ಣ ಅವರ 12 ನೇ. ಶತಮಾನದ ಸಮಾನತೆ ಸಾರುವ ಬಹು ನಿರೀಕ್ಷಿತ ಭಕ್ತಿ ಪ್ರಧಾನ ಚಿತ್ರ ಇದಾಗಿದೆ. ಜಗಜ್ಯೋತಿ ಬಸವೇಶ್ವರರ ಮುಂದಾಳತ್ವದಲ್ಲಿ ಅನುಭವ ಮಂಟಪ, ಇಷ್ಟಲಿಂಗ, ವಿಭೂತಿ ರುದ್ರಾಕ್ಷಿಗಳನ್ನು, ಮತ್ತು ಕಲ್ಯಾಣದ ಕ್ರಾಂತಿ ನಂತರ ವಚನಗಳ ಸಮಗ್ರ ರಕ್ಷಣೆಗಾಗಿ ಶರಣ–ರು ಕೈಕೊಂಡ ಕಾರ್ಯಗಳನ್ನು, ಕಾಯಕದಲ್ಲಿ ನಿರತರಾದ ಅನೇಕ ಶರಣರನ್ನು ತೋರಿಸುವ ಚಿತ್ರವೇ ಶರಣರ ಶಕ್ತಿಯಾಗಿದೆ. ಮಿಶ್ರಕೋಟಿ, ಕಾಮಧೇನು, ಗಂಜಿಗಟ್ಟಿ, ಹುಬ್ಬಳ್ಳಿ, ಧಾರವಾಡ ,ಉಳವಿ, ಬಸವ ಕಲ್ಯಾಣ, ಬೀದರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಶರಣ–ರು ಸಂಚರಿಸಿದ ಹಾದಿಗಳನ್ನು ಗುರುತಿಸಿ ಚಿತ್ರೀಕರಣ ನಡೆಸಲಾಗಿದೆ, ಜಗಜ್ಯೋತಿ ಬಸವಣ್ಣನವರಾಗಿ ಮಂಜುನಾಥಗೌಡ್ರು ಪಾಟೀಲ, ಚನ್ನ ಬಸವಣ್ಣನವರಾಗಿ ರಂಜನ್‌ರಾಜ್, ಅಕ್ಕನಾಗಮ್ಮ ಪಾತ್ರದಲ್ಲಿ ಆರಾಧನಾ ಕುಲಕರ್ಣಿ, ಗಂಗಾಂಬಿಕೆಯಾಗಿ ಸಂಗೀತಾ ವಸಂತ, ನೀಲಾಂಬಿಕೆ ಅಮೃತಾ ಸವಡಿ ಜೋಶಿ, ಅಕ್ಕ ಮಹಾದೇವಿಯಾಗಿ ರಮ್ಯಾ ಗೌಡ್ರು, ಬಿಜ್ಜಳನಾಗಿ ರಾಘವೇಂದ್ರ ಕಬಾಡಿ, ಅಲ್ಲಮಪ್ರಭುವಾಗಿ ಮಂಜುನಾಥಯ್ಯ ಬಿ.ಎಮ್, ಸಿದ್ಧರಾಮರಾಗಿ ಸಚಿನ್ ಮಾಗಣಗೇರಿ, ಮಾಜಿ ಶಾಸಕ, ರಂಗಕರ್ಮಿ ರಾಮಕೃಷ್ಣ ದೊಡ್ಡಮನಿ ಹರಳಯ್ಯನಾಗಿ, ವಿಶ್ವೇಶ್ವರಿ ಹಿರೇಮಠ ಕಲ್ಯಾಣಮ್ಮನಾಗಿ, ಪಾಲಿಕೆ ಸದಸ್ಯ ಚೇತನ ಹಿರೇಕೆರೂರ ಬಿಜ್ಜಳನ ಮಗನಾಗಿ, ಮೀನಾಕ್ಷಿ ಒಂಟಮೂರಿ ದಾನಮ್ಮನಾಗಿ, ಸುರೇಶ ಗೋಕಾಕ ಮಲ್ಲಯ್ಯನಾಗಿ, ಶರಣೆ ಸಂಕವ್ವೆಯಾಗಿ ಭುವನ ಸುಂದರಿ ಕಿರೀಟ ಮುಡಿಗೇರಿಸಿ ಕೊಂಡ ಡಾ, ಶ್ರುತಿ ಹೆಗಡೆ, ಸಂಪಾದಕರು, ಪತ್ರಕರ್ತರಾದ ರವಿಕಾಂತ ಅಂಗಡಿ ಮೊದಲಾದವರು ಮನೋಜ್ಞವಾಗಿ ಅಭಿನಯಿಸಿದ್ದಾರೆ ಎಂದರು. ಚಿತ್ರಕ್ಕೆ ಮುಂಜಾನೆ ಮಂಜು ಛಾಯಾಗ್ರಹಣ, ಕೆ.ಕಲ್ಯಾಣ ಸಾಹಿತ್ಯ, ವಿನುಮನಸು ಸಂಗೀತ, ಆರ್.ಮಹಾಂತೇಶ ಸಂಕಲನ, ಡಾ, ಪ್ರಭು ಗಂಜಿಹಾಳ, ಡಾ, ವೀರೇಶ ಹಂಡಿಗಿ ಪತ್ರಿಕಾ ಸಂಪರ್ಕ, ಡಿಸೈನ್ ಶಂಕರ ಎನ್ ಪಾಟೀಲ್ ಮತ್ತು ದೇವು, ದಿಲೀಪ್ ಶರ್ಮ ಚಿತ್ರಕಥೆ, ಸಂಭಾಷಣೆ ಜೊತೆಗೆ ಎರಡು ಹಾಡುಗಳನ್ನು ಬರೆದಿದ್ದು ಜೊತೆಗೆ ನಿರ್ದೇಶನ ಹೊಣೆ ಹೊತ್ತಿದ್ದಾರೆ. ಚಿತ್ರವನ್ನು ಶ್ರೀಮತಿ ಅರಾಧನಾ ಕುಲಕರ್ಣಿ ನಿರ್ಮಿಸಿದ್ದು ಸಧ್ಯ ಮಠಾಧೀಶರಾದಿಯಾಗಿ ಸಾರ್ವಜನಿಕರಿಂದಲೂ ಕರ್ನಾಟಕ ದಾದ್ಯಂತ ಸುದ್ದಿ ಮಾಡುತ್ತಿರುವ ಈ ಚಿತ್ರ ಹೊಸದೊಂದು ಕ್ರಾಂತಿಯನೇ ಮಾಡಲಿದೆ. ಉತ್ತರ ಕರ್ನಾಟಕದ ಮಂದಿಯ ಈ ಚಿತ್ರವನ್ನು ಚಿತ್ರ ಮಂದಿರಗಳಿಗೆ ಪ್ರೇಕ್ಷಕರು ಬಂದು ಗೆಲ್ಲಿಸಬೇಕು,ಪತ್ರಿಕಾ ಮಾಧ್ಯಮದವರೂ ಚಿತ್ರಕ್ಕೆ ಬೆಂಬಲಿಸಿ ಪ್ರೋತ್ಸಾಹ ನೀಡಬೇಕು ಎಂದು ನಿಮಾ–ಪಕಿ ಆರಾಧನಾ ಹೇಳಿದರು.
ನಂತರ ಕುಂದಗೋಳ ಬಸವಣ್ಣಜ್ಜ ಮಠದ ಬಸವಣ್ಣಜ್ಜ ಶ್ರೀಗಳು ಪೋಸ್ಟರ ಬಿಡುಗ–ಡೆ ಮಾಡಿ ತಾವೂ ಚಿತ್ರ ಮಂದಿರಕ್ಕೆ ಬಂದು ಚಿತ್ರ ವೀಕ್ಷಿಸುವದಾಗಿ ಮತ್ತು ಸರ್ವ ಶರಣ ಬಂಧುಗಳು ಚಿತ್ರವನ್ನು ನೋಡಿ ಚಿತ್ರ ತಂಡವನ್ನು ಪ್ರೋತ್ಸಾಹಿಸುವಂತೆ ಕರೆ ಕೊಟ್ಟರು.

**ವರದಿ**
**ಡಾ.ಪ್ರಭು ಗಂಜಿಹಾಳ**
**ಮೊ; 9448775346**

## ಆಹಾರ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯ: ಜನರಿಗೆ ಇನ್ನೂ ಮುಟ್ಟದ ಪಡಿತರ ಭಾಗ್ಯ





**ಸಿಹಿ ಕಹಿ ಸುದ್ದಿ,**
**ಮಾನ್ವಿ :** ರಾಜ್ಯ ಸರಕಾರ ಪ್ರತಿ ತಿಂಗಳು 10 ನೇ. ತಾರೀಖಿ ನೊಳಗೆ ನ್ಯಾಯಬೆಲೆ ಅಂಗಡಿಗೆ ಪಡಿತರ ಧಾನ್ಯವನ್ನು ಸರಬರಾಜು ಮಾಡಬೇಕೆಂದು ಸುತ್ತೋಲೆ ಹೊರಡಿಸಿದೆ. ಆದರೆ ರಾಯಚೂರು ಆಹಾರ ಇಲಾಖೆ ಉಪ ನಿರ್ದೇಶಕ ಕೃಷ್ಣಪ್ಪ ಹಾಗು ಮಾನ್ವಿ ಆಹಾರ ಇಲಾಖೆ ಅಧಿಕಾರಿಗಳ ಕಳ್ಳಾಟ ದಿಂದಾಗಿ ಇದುವರೆಗೂ ಸರಬರಾಜು ಮಾಡದಿರುವುದು ಬೆಳಕಿಗೆ ಬಂದಿದೆ.
ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನಲ್ಲಿ ಹೆಚ್ಚು ಕಾರ್ಮಿಕರಿದ್ದಾರೆ. ಸರಕಾರ ಕೊಡುವ ಪಡಿತರ ಧಾನ್ಯವನ್ನೆ ನೆಚ್ಚಿಕೊಂಡು ಗ್ರಾಮೀಣ ಭಾಗದವರು ಜೀವನ ಮಾಡುತ್ತಿದ್ದಾರೆ. ನ್ಯಾಯಬೆಲೆ ಅಂಗಡಿ ಮಾಲೀಕರ ಹತ್ತಿರ ನಮಗೆ ಸರಕಾರದ ಅಕ್ಕಿ ಯಾವಾಗ ಕೊಡುತ್ತೀರಾ ಎಂದು ಕೇಳಿದರೆ ಸರಕಾರದಿಂದ ಇನ್ನೂ ಬಂದಿಲ್ಲ ಎಂದು ನ್ಯಾಯಬೆಲೆ ಅಂಗಡಿ ಮಾಲಕರು ಹೇಳುತ್ತಿಂದ್ದ ರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಜನರು ಛೀಮಾರಿ ಹಾಕುತ್ತಿದ್ದಾರೆ.
ಸರಕಾರದಸುತ್ತೋಲೆರಾಜ್ಯದತಾಲೂಕಮತ್ತುಜಿಲ್ಲೆಗಳಿಗೆಅನ್ವಹಿಸುವುದು ಬೇರೆ ಮಾನ್ವಿ ತಾಲೂಕಲ್ಲಿ ಇರುವುದು ಬೇರೆ, ಯಾಕಂದರೆ ರಾಯಚೂರು ಆಹಾರ ಇಲಾಖೆ ಉಪ ನಿರ್ದೇಶಕ ಕೃಷ್ಣಪ್ಪ, ಮಾನ್ವಿ ತಾಲೂಕ ಆಹಾರ ಇಲಾಖೆ ಅಧಿಕಾರಿಗಳು ಕುತಂತ್ರ ಮಾಡಿ ಕೊಂಡು ಪ್ರತಿ ತಿಂಗಳು ಪಡಿತರ ಎತ್ತುವಳಿಯನ್ನು ತಡವಾಗಿ ಪ್ರಾರಂಭ ಮಾಡಿ ಸರಕಾರದ ಹಿರಿಯ ಅಧಿಕಾರಿಗಳಿಗೆ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಚ್ಯುತಿ ಕೆಲಸ ಮಾಡುತ್ತಿದ್ದಾರೆ.
ಮಾನ್ವಿತಾಲೂಕುಸೇರಿದಂತೆಸಿರಿವಾರತಾಲೂಕಲ್ಲಿನೂರಾರುನ್ಯಾಯಬೆಲೆ ಅಂಗಡಿಗಳಿಗೆ ಮಾನ್ವಿ ಗೋದಾಮಿ ನಿಂದ ಸಾಗಣೆಯಾಗಬೇಕು. ಆದರೆ ಆಹಾರ ಇಲಾಖೆ ಅಧಿಕಾರಿಗಳ ಕಳ್ಳಾಟ ದಿಂದಾಗಿ ಜನರಿಗೆ ಪಡಿತರ ಮುಟ್ಟಿಸಬಾರದು ಎಂಬ ಉದ್ದೇಶ ಇಟ್ಟು ಕೊಂಡು ತಡವಾಗಿ ಎತ್ತುವಳಿ ಮಾಡುತ್ತಿದ್ದಾರೆಂದು ದಲಿತ ಸಂಘಟನೆ ಮುಖಂಡರ ಆರೋಪವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಹೇಬ್ರೆ ನೀವು ಬಡ ಜನರಿಗೆ ತಂದ ಅನ್ನಭಾಗ್ಯಯೋಜನೆಯಅಕ್ಕಿಮಾನ್ವಿತಾಲೂಕಿನಜನತೆಗೆಮುಟ್ಟಿಲ್ಲವೆಂದರೆ ಏನಿದರ ಅರ್ಥ, ಮಾನ್ವಿ ತಾಲೂಕಿನ ಜನತೆ ಸಿದ್ದರಾಮಯ್ಯ ಮಾಡಿದ ಅಕ್ಕಿ ಎಂದು ಅಮಾಯಕರು ಕೂಲಿ ಕಾರ್ಮಿಕರು ನೆನೆಸುತ್ತಾರೆ ನಿಮ್ಮನ್ನ. ಆದರೆ

ಮಾನ್ವಿಯಲ್ಲಿ ಆಹಾರ ಇಲಾಖೆ ಶಿರಸ್ತೇದಾರ್ ಹಾಗೂ ಆಹಾರ ನಿರೀಕ್ಷಕರ ಬೇ ಜವಾಬ್ದಾರಿಯಿಂದಾಗಿ ಜನರಿಗೆ ಇದುವರೆಗೂ ಪಡಿತರ ಮುಟ್ಟಿಲ್ಲ. ತಿಂಗಳ ಕೊನೆಯ ದಿನಗಳಲ್ಲಿ ನ್ಯಾಯಬೆಲೆ ಅಂಗಡಿಗೆ ಸರಬರಾಜು ಮಾಡುತ್ತಾರೆ ಇದು ದೊಡ್ಡ ದುರಂತ.
**– ರಿಯಾಜ್ ನಾಯ್ಕ, ಸಾಮಾಜಿಕ ಕಾರ್ಯಕರ್ತರು ಮಾನ್ವಿ.**
ಮಾನ್ವಿ ತಾಲೂಕಲ್ಲಿ ನ್ಯಾಯಬೆಲೆ ಅಂಗಡಿಗಳಿಗೆ ಪಡಿತರ ಸರಬರಬರಾಜುಗಿಲ್ಲದ ಕಾರಣ ಜನರಿಗೆ ನವೆಂಬರ್ ತಿಂಗಳ ಪಡಿತರ ಇದುವರೆಗೂ ಮುಟ್ಟಿಲ್ಲ. ಈ ದುರಂತಕ್ಕೆ ಮಾನ್ವಿಯ ಆಹಾರ ಇಲಾಖೆ ಶಿರಸ್ತೇದಾರ್ ಹಾಗೂ ಆಹಾರ ನಿರೀಕ್ಷಕರ ದೌರ್ಬಲ್ಯವೇ ಕಾರಣ
**– ರಮೇಶ ಕರೇಗುಡ್ಡ, ದಲಿತ ಸೇನಾ ತಾಲೂಕ ಅಧ್ಯಕ್ಷರು ಮಾನ್ವಿ.**

ನವೆಂಬರ್ ತಿಂಗಳ ಅಕ್ಕಿ ಇನ್ನೂ ನ್ಯಾಯ ಬೆಲೆ ಅಂಗಡಿಗೆ ಸೇರಿಲ್ಲ ಪಡಿತರ ಧಾನ್ಯ ಯಾವಾಗ ಮುಟ್ಟಬೇಕು ಜನರಾದರು ಸರತಿ ಸಾಲಲ್ಲಿ ನಿಂತು ಯಾವಾಗ ಪಡೆಯಬೇಕು ನೀವೆ ಹೇಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಹೇಬ್ರೆ. ಮಾನ್ವಿಯಲ್ಲಿ ಪಡಿತರ ಅಕ್ಕಿ ಸಾಗಣೆ ವಿಳಂಬವಾಗುವುದಕ್ಕೆ ಆಹಾರ ಇಲಾಖೆಯ ಉಪ ನಿರ್ದೇಶಕ ಕೃಷ್ಣಪ್ಪ ಹಾಗುಉ ಮಾನ್ವಿಯ ಆಹಾರ ಇಲಾಖೆ ಅಧಿಕಾರಿಗಳು ಸರಿಯಾಗಿ ಡ್ಯೂಟಿ ಮಾಡದೆ ಇರುವುದೆ ಈ ದುರಂತಕ್ಕೆ ಕಾರಣ ಎಂದು ಸಾಮಾಜಿಕ ಕಾರ್ಯಕರ್ತರ ಆರೋಪವಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಪಟ್ಟಣ ಪಂಚಾಯತಿ ಕಾರ್ಯಾಲಯ ನರೇಗಲ್

### –: ಸಾರ್ವಜನಿಕ ಪ್ರಕಟಣೆ:–




ಯಾವತ್ತು ನರೇಗಲ್ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿನ ಸಾರ್ವಜನಿಕರಿಗೆ ಈ ಪ್ರಕಟಣೆ ಮೂಲಕ ತಿಳಿಯ ಪಡಿಸುವುದೆನೆಂದರೆ ನರೇಗಲ್ ಪಟ್ಟಣದಲ್ಲಿ ಕಟ್ಟಡಗಳ ಭಗ್ನ ಅವಶೇಷಗಳನ್ನು ಎಲ್ಲೆಂದರಲ್ಲಿ ಹಾಕುತ್ತಿರುವುದ ರಿಂದ ಸಾರ್ವಜನಿಕರಿಗೆ ಹಾಗೂ ವಾಹನಗಳ ಓಡಾಟಕ್ಕೆ ತುಂಬಾ ತೊಂದರೆ ಉಂಟಾಗುತ್ತಿದ್ದು. 1964 (CONSTRUCTION AND DEMOLITION WASTE MANAGEMENT RULES 2016) ರೀತ್ಯಾ ದಂಡಕ್ಕೆ ಅರ್ಹವಾದ ಕೃತ್ಯವಾಗಿರುತ್ತದೆ.
ಅದರಿಂದ ಕಟ್ಟಡಗಳ ಭಗ್ನ ಅವಶೇಷಗಳನ್ನು ಎಲ್ಲೆಂದರಲ್ಲಿ ಎಸೆಯದೆ/ಹಾಕದೆ ತಾತ್ಕಾಲಿಕವಾಗಿ ನರೇಗಲ್ ಪಟ್ಟಣ ಪಂಚಾಯತಿಯ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಜಾಗವನ್ನು ನಿಗಧಿ ಪಡಿಸಿದ್ದು, ನಿಗದಿತ ಶುಲ್ಕ ಪಾವತಿಸಿ ವಾಹನವನ್ನು ಅಗತ್ಯವಿದ್ದಲ್ಲಿ ಪಡೆಯಬಹುದು ಅಥವಾ ಪುರಸಭೆಯಲ್ಲಿ ನೋಂದಾಯಿಸಿ ತಮ್ಮ ಸ್ವಂತ ವೆಚ್ಚದಲ್ಲಿ ಖಾಸಗಿ ವಾಹನವನ್ನು ಉಪಯೋಗಿಸಿ ಕೊಂಡು ನಿಗಧಿತ ಸ್ಥಳದಲ್ಲಿ ವಿಲೇವಾರಿ ಮಾಡುವುದು. ಸದರಿ ಆದೇಶವನ್ನು ಉಲ್ಲಂಘಿಸಿ ಪಟ್ಟಣ ವ್ಯಾಪ್ತಿಯಲ್ಲಿಯ ಸಾರ್ವಜನಿಕ ಸ್ಥಳ ಅಥವಾ ರಸ್ತೆಗಳಲ್ಲಿ ಹಾಕಿದಲ್ಲಿ ಪುರಸಭೆ ಬೈಲಾ ರೀತ್ಯಾ ರೂ. 1000/– ವರೆಗೆ ದಂಡ ವಿಧಿಸಲಾಗುವುದು ಹಾಗೂ ಸೂಕ್ತ ಕಾನೂನು ಅಡಿ ಕ್ರಮ ಕೈಗೊಳ್ಳಲಾಗುವುದು. ಹೆಚ್ಚಿನ ಮಾಹಿತಿಗಾಗಿ ಪಟ್ಟಣ ಪಂಚಾಯತಿಯ ಆರೋಗ್ಯ ಶಾಖೆಯಲ್ಲಿ ಪಡೆಯ ಬಹುದಾಗಿದೆ.
"ಪಟ್ಟಣವನ್ನು ಸ್ವಚ್ಚವಾಗಿಡಲು ಹಾಗೂ ಸ್ವಚ್ಚ ಭಾರತ್ ಮಿಷನ್ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸಾರ್ವಜನಿಕರು ಸಂಪೂರ್ಣ ಸಹಕಾರ ನೀಡಬೇಕಾಗಿ ಈ ಮೂಲಕ ಕೋರಿದೆ"

## ವೀರರಾಣಿ ಕಿತ್ತೂರು ಚೆನ್ನಮ್ಮ 246ನೇ ಜಯಂತ್ಯೋತ್ಸ ಕಾರ್ಯಕ್ರಮ



**ಸಿಹಿ ಕಹಿ ಸುದ್ದಿ,**
**ಗಜೇಂದ್ರಗಡ :** ಬ್ರಿಟಿಷರ ವಿರುದ್ಧ ಹೋರಾಡಿದ ಮಹನೀಯರನ್ನು ಪ್ರತಿಯೊಬ್ಬರೂ ಸ್ಮರಿಸಿ ಕೊಳ್ಳಬೇಕು ಹಾಗೂ ಬ್ರಿಟಿಷರ ವಿರುದ್ಧ ಹೋರಾಡಿ ದೇಶಾಭಿಮಾನ ಮೆರೆದ ಚನ್ನಮ್ಮಳ ತ್ಯಾಗ ಇಂದಿನ ಯುವ ಜನಾಂಗಕ್ಕೆ ಸ್ಫೂರ್ತಿ ಹಾಗೂ ಶಕ್ತಿಯಾಗಲಿ ಎಂದು ಪಂಚಮಸಾಲಿ ತಾಲೂಕಾಧ್ಯಕ್ಷ ಸಿದ್ದಣ್ಣ ಬಂಡಿ ಹೇಳಿದರು.
ತಾಲೂಕಿನ ಹಾಲಕೆರೆ ಗ್ರಾಮದಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮ ಜಯಂತ್ಯೋತ್ಸ ಹಾಗೂ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು.
ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಆರ್.ಎಸ್. ಬುರಡಿ ಮಾತನಾಡಿ ಪ್ರತಿಭಾವಂತರನ್ನು ಸಮಾಜ ಗೌರವಿಸುತ್ತದೆ. ಕಿತ್ತೂರು ಚೆನ್ನಮ್ಮಳು ಒಬ್ಬ ರಾಷ್ಟ್ರ ಪ್ರೇಮಿ, ಸ್ವಾಭಿಮಾನಿಯಾಗಿದ್ದಳು. ಯಾರು ಪ್ರತಿಭಾವಂತರು ಹಾಗೂ ಸಾಧಕರನ್ನು ಜಾತಿಯಿಂದ ನೋಡಕೆ ಆಗಲ್ಲ. ವಿದ್ಯಾರ್ಥಿಗಳು ಸಾಧನೆ ಮಾಡುವುದರ ಮೂಲಕ ತಂದೆ ತಾಯಿಗಳ ಆಸೆಯನ್ನು ಈಡೇರಿಸಬೇಕು ಎಂದರು.
ಕೆ.ಎಸ್.ಎಸ್.ಕಾಲೇಜು ಉಪನ್ಯಾಸಕ ಎಸ್.ಎ. ಸಂಕನಗೌಡ್ರ ಅವರು ವೀರರಾಣಿ ಕಿತ್ತೂರು ಚೆನ್ನಮ್ಮಳ ಜೀವನ ಚರಿತ್ರೆಯ ಕುರಿತು ವಿಶೇಷ ಉಪನ್ಯಾಸ ನೀಡಿದರು.
ಹಾಲಕೆರೆ ಅನ್ನದಾನೇಶ್ವರ ಸಂಸ್ಥಾನ ಮಠದ ಪರಮ ಪೂಜ್ಯ ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು ಮಾತನಾಡಿದ ಅವರು ಇಂದಿನ ಆದುನಿಕ ಯುಗದಲ್ಲಿ ಮಹಿಳೆಯರು ಕಿತ್ತೂರು ಚೆನ್ನಮ್ಮಳ ತತ್ವ ಆದರ್ಶಗಳನ್ನು ಪ್ರತಿಯೊಬ್ಬರೂ ಅಳವಡಿಸಿ ಕೊಳ್ಳಬೇಕು. ಸಮಾಜದಲ್ಲಿ ತಮ್ಮದೆ ಆದ ಚಾಪು ಮೂಡಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರು ಯಾವ ಜಾತಿಗೆ ಸೀಮಿತವಾಗಿದೆ ದೇಶದಲ್ಲಿ ಕಿತ್ತೂರು ಚೆನ್ನಮ್ಮಳನ್ನು ಎಲ್ಲರೂ ಗೌರವಿಸಬೇಕು.
ಸಮಾಜ ಮುಖಿ ಕಾರ್ಯಗಳಲ್ಲಿ ಪ್ರತಿಯೊಬ್ಬರೂ ಪಾಲ್ಗೊಳ್ಳಬೇಕು ಎಂದು ಆಶೀರ್ವಚನ ನೀಡಿದರು.
ಇದೇ ಸಂದರ್ಭದಲ್ಲಿ ವಿಶ್ವನಾಥ ಜಿಡ್ಡಿಬಾಗಿಲು, ಹನುಮಂತಪ್ಪ ಪ್ರಭಣ್ಣವರ, ಅಂದಪ್ಪ ಸರ್ವಿ,ಶರಣಪ್ಪ ಹೊನ್ನವಾಡ, ವಿರೇಶ ರೊಟ್ಟಿ, ಶರಣಪ್ಪ ರೊಟ್ಟಿ, ಮಲ್ಲಿಕಾರ್ಜುನ ಅಂಗಡಿ, ಅಶೋಕ ಅಂಗಡಿ, ಬಸವರಾಜ ತೊಂಡಿಹಾಳ,ಕೆ.ಎ.ಕೊಪ್ಪದ, ಎಮ್.ಎಸ್ ಹೊನ್ನವಾಡ ಸೇರಿದಂತೆ ಸಮಾಜದ ಮುಖಂಡರು ಹಾಗೂ ಯುವಕರು ಹಾಜರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಸ್.ವಿ ಸಂಕನಗೌಡ್ರ ರೋಣ**

## ಇಂದು ಕಾ.ನಿ.ಪ ಧ್ವನಿ ಸಂಘದಿಂದ ರಾಷ್ಟ್ರೀಯ ಪತ್ರಿಕಾ ದಿನಾಚರಣೆ

**ಸಿಹಿ ಕಹಿ ಸುದ್ದಿ**
**ಕೊಟ್ಟೂರು :** ಪಟ್ಟಣದ ಬಾಲಾಜಿ ಕನ್ವೆನ್ಷನ್ ಸೆಂಟರ್ ನಲ್ಲಿ ಕಾನಿಪ ಧ್ವನಿ ಸಂಘ ಕೊಟ್ಟೂರು ತಾಲೂಕಾ ಘಟಕ ದಿಂದ ನ 19 ರಂದು ಬೆಳಿಗ್ಗೆ 11 ಕ್ಕೆ ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.
ಜಿ.ಬಿ.ವಿನಯ್ ಕುಮಾರ್ ಇನ್ಸ್ಯೈಟ್ ಸಂಸ್ಥಾಪಕರು ದಾವಣಗೆರೆ ಇವರಿಂದ ವಿದ್ಯಾರ್ಥಿ ಬಳಗಕ್ಕೆ ವಿಶೇಷ ಎಪಿಎಸ್, ಐಎಎಸ್, ಸ್ಪರ್ಧಾತ್ಮಕ ಹುದ್ದೆಗಳ ಕುರಿತು ಉಪನ್ಯಾಸ ನೀಡಲಿದ್ದಾರೆ. ಕೊಟ್ಟೂರಿನ ಎಲ್ಲಾ ಕಾಲೇಜಿನ ವಿದ್ಯಾರ್ಥಿಗಳು ಸದುಪಯೋಗ ಪಡೆದು ಕೊಳ್ಳಬೇಕೆಂದು ನಮ್ಮ ಸಂಘದ ಆಶಯ. ಕಾ.ನಿ.ಪ ಧ್ವನಿ ಸಂಘದ ರಾಜ್ಯಾಧ್ಯಕ್ಷ ಬಂಗ್ಲೆ ಮಲ್ಲಿಕಾರ್ಜುನ ಇವರು ಪ್ರಾಸ್ತಾವಿಕವಾಗಿ ಮಾತನಾಡುವವರಿದ್ದಾರೆ. ಹಿರಿಯ ಪತ್ರಕರ್ತರು ಪತ್ರಿಕೆ ಮಹತ್ವ ಮತ್ತು ಉದ್ದೇಶ, ಜನ ಸಾಮಾನ್ಯರು ಹಾಗೂ ಸರ್ಕಾರದ ಮಧ್ಯೆ ಬೆಸುಗೆಯಾಗಿ ಹೇಗೆ ಕೆಲಸ ನಿರ್ವಹಿಸಬೇಕು ಎಂಬ ವಿಷಯ ಕುರಿತು ಮಾತನಾಡಲಿದ್ದಾರೆ. ಕಾರ್ಯಕ್ರಮಕ್ಕೆ ಆಗಮಿಸುವ ಗಣ್ಯಾತಿ ಗಣ್ಯರು ಕೊಟ್ಟೂರು ಸುತ್ತಮುತ್ತಲಿನ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ರಾಜಕೀಯ ಮುಖಂಡರು ಸಾರ್ವಜನಿಕರು ಕಾರ್ಯಕ್ರಮಕ್ಕೆ ಆಗಮಿಸಿ ಕಾರ್ಯಕ್ರಮಕ್ಕೆ ಯಶಸ್ವಿ ನೀಡಬೇಕೆಂದು ಕಾ.ನಿ.ಪ ಧ್ವನಿ ಸಂಘದ ಕೊಟ್ಟೂರು ತಾಲೂಕು ಘಟಕದ ಅಧ್ಯಕ್ಷರಾದ ಕನ್ನಾಕಟ್ಟಿ ಶಿವರಾಜ್ ಹಾಗೂ ಸರ್ವ ಸದಸ್ಯರು ಸ್ವಾಗತ ಕೋರಿ ಪತ್ರಿಕೆ ಪ್ರಕಟಣೆಗೆ ತಿಳಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ. ನ್ಯೂಸ್ ಕನ್ನಡ ಚಾನಲ್: ಪ್ರದೀಪ್. ಕುಮಾರ್.ಸಿ.ಕೊಟ್ಟೂರು**

## ಮಹಿಳೆಯರಿಗಿದ್ದ ಶೂದ್ರತನ ಹೋಗಲಾಡಿಸಿದ ಬಸವಣ್ಣ: ಗುರುಮಹಾಂತ ಶ್ರೀ



**ತೇರದಾಳ :** 12ನೇ ಶತಮಾನದ ಮೊದಲು ಮಹಿಳೆಯರನ್ನು ಶೂದ್ರರೆಂದು ಪರಿಗಣಿಸಲಾಗುತ್ತಿತ್ತು. ಆದರೆ 12ನೇ ಶತಮಾನದಲ್ಲಿ ಬಸವಣ್ಣ ಮಹಿಳೆಯರಿಗೆ ಶಿಕ್ಷಣ, ಕಾಯಕ ಒದಗಿಸಿ ಸ್ವಾವಲಂಬಿ ಜೀವನ ನಡೆಸುವುದರ ಮೂಲಕ ಮಹಿಳೆಯರಿಗಿದ್ದ ಶೂದ್ರತನ ಹೋಗಲಾಡಿಸಿದರು ಎಂದು ಇಳಕಲ್ಲನ ಗುರುಮಹಾಂತ ಶ್ರೀ ಹೇಳಿದರು. ಅಲ್ಲಮಪ್ರಭುದೇವರ ನೂತನ ಮಂದಿರ ಲೋಕಾರ್ಪಣೆ ನಿಮಿತ್ತ ಭಾನುವಾರ ಸಂಜೆ ಹಮ್ಮಿಕೊಂಡಿದ್ದ ಮಹಿಳಾ ಸಮಾವೇಶ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.
ಮಹಿಳೆಯರ ಸ್ವಾತಂತ್ರ್ಯಕ್ಕಾಗಿ ಮನೆಯನ್ನು ತೊರೆದು ಬಂದರು. ಆದರೆ ಇಂದು ಹೆಣ್ಣು ಮಗು ಜನಿಸಿದರೆ ಸಾಕು ಮಹಿಳೆಯರೆ ಕೊರಗುವಂತ ಸ್ಥಿತಿ ನಿರ್ಮಾಣವಾಗಿದ್ದು ವಿಪರ್ಯಾಸ ಎಂದರು. ಹೆಣ್ಣು ಕನಿಷ್ಠ ಗಂಡು ಶ್ರೇಷ್ಠ ಎಂಬ ಭಾವನೆ ಬೇಡ. ತಾಯಿ ಆದವಳು ಮಕ್ಕಳಲ್ಲಿ ಸಮಾನತೆ ತರಬೇಕೆಂದು ಹೇಳಿದರು. ವಿಜಯಪುರ ಷಣ್ಮುಖಾರೂಢ ಮಠದ ಸಿದ್ಧಾರೂಢ ಶ್ರೀ ಮಾತನಾಡಿ, ಅಂಗ ಲಿಂಗ ಜಂಗಮ ಈ ಮೂರು ಅಂಶಗಳನ್ನು ಅರಿತು ಬದುಕು ನಡೆಸಿದಾಗ ಮಾತ್ರ ಜೀವನ ಪಾವನ ಆಗಲು ಸಾಧ್ಯ. ಮಕ್ಕಳಿಗೆ ನೀತಿ ಪಾಠ ಹೇಳಬೇಕಾದ ತಂದೆ ತಾಯಿಗಳು ಮಕ್ಕಳನ್ನು ಶಿಕ್ಷಣದ ನೆಪದಲ್ಲಿ ದೂರು ಮಾಡಿಕೊಳ್ಳುತ್ತಾರೆ. ತಂದೆ ತಾಯಿಗೆ ವಯಸ್ಸು ಆದ ಬಳಿಕ ಮಕ್ಕಳು ವೃದ್ಧಾಶ್ರಮಕ್ಕೆ ಕಳುಹಿಸುವಂತ ಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಮೊದಲು ಪಾಲಕರು ಜಾಗೃತರಾಗಬೇಕೆಂದು ಹೇಳಿದರು. ಕೂಡಲಸಂಗಮದ ಜಗದ್ಗುರು ಜಯಮೃತ್ಯುಂಜಯ ಶ್ರೀ ತುಂಗಳದ ಅನುಸುಯಾ ಮಾತೋಶ್ರೀ, ಶಿವಮೊಗ್ಗ ಜಿಲ್ಲೆಯ ಅಕ್ಕಮಹಾದೇವಿ ಮಾತೋಶ್ರೀ, ಜನವಾಡದ ಅಲ್ಲಮಪ್ರಭು ಶ್ರೀ ಮಾತನಾಡಿದರು.
ಹಿರಿಯ ಸಾಹಿತಿ ಶಾರದಾ ಮಳ್ಳೂರ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿವಾನಂದ ಶ್ರೀ, ಶಿವಶಂಕರ ಶಿವಾಚಾರ್ಯ, ಡಾ. ಮಹಾಂತಪ್ರಭು ಶ್ರೀ, ಶಿರೂರಿನ ಡಾ. ಬಸವಲಿಂಗ ಶ್ರೀ, ಗಂಗಾಧರ ದೇವರು, ಅರ್ಚಕರ ಸಮಿತಿ ಅಧ್ಯಕ್ಷ ಗುಹೇಶ್ವರ ಪುರಾಣಿಮಠ, ವಿಜಯಮಹಾಂತೇಶ ನಾಡಗೌಡ, ಪಸನ್‌ಕುಮಾರ ದೇಸಾಯಿ, ಮಗೆಪ್ಪ ದೇಸಾಯಿ, ಪರಯ್ಯ ಮೇಲಿನಮನಿ ಇದ್ದರು.

# ನೇಕಾರ ವಸತಿ ಯೋಜನೆಯ ಫಲಾನುಭವಿಗಳ ಆಯ್ಕೆಯಲ್ಲಿ ಗೋಲ್‌ಮಾಲ್

## 40ಕ್ಕೂ ಅಧಿಕ ಜನ ಅನರ್ಹ ಆಯ್ಕೆಪಟ್ಟಿ ರದ್ದುಗೊಳಿಸಿ, ಅರ್ಹರಿಗೆ ನೀಡಲು ಪುರಸಭೆ ಸದಸ್ಯರ ಒತ್ತಾಯ



**ಮಹಾಲಿಂಗಪುರ :** ದೇವರಾಜ ಅರಸು ವಸತಿ ಯೋಜನೆಯಡಿ ವಸತಿ ಇಲಾಖೆಯು ಕುಶಲ ಕರ್ಮಿ ನೇಕಾರರ ವಸತಿ ರಹಿತರಿಗೆ 2021-22ನೇ ಸಾಲಿನಲ್ಲಿ ಮಂಜೂರಿಯಾದ 100 ಮನೆಗಳಲ್ಲಿ 40ಕ್ಕೂ ಅಧಿಕ ನೇಕಾರರು ಮತ್ತು ಕುಶಲ ಕರ್ಮಿಗಳು ಅಲ್ಲದ ವ್ಯಕ್ತಿಗಳನ್ನು ಆಯ್ಕೆಮಾಡಿ ನೇಕಾರರಿಗೆ ಅನ್ಯಾಯ ಮಾಡಲಾಗಿದೆ. ಜಿಲ್ಲಾಧಿಕಾರಿಗಳು ಮತ್ತು ಜವಳಿ ಇಲಾಖೆ ಉಪ ನಿರ್ದೇಶಕರು ನೇಕಾರ ಕಾಲನಿಯಲ್ಲಿ ಅರ್ಹ ಫಲಾನುಭವಿಗಳನ್ನು ಹೊರತು ಪಡಿಸಿ, ಇನ್ನುಳಿದ 40ಕ್ಕೂ ಅಧಿಕ ಅನರ್ಹ ಫಲಾನುಭವಿಗಳ ಪಟ್ಟಿಯನ್ನು ರದ್ದುಗೊಳಿಸಬೇಕೆಂದು ಪುರಸಭೆ ಮಾಜಿ ಅಧ್ಯಕ್ಷ ಬಸವರಾಜ ಹಿಟ್ಟಿನಮಠ ಹೇಳಿದರು.

ರವಿವಾರ ಪುರಸಭೆ ಸದಸ್ಯ ಪ್ರಲ್ಹಾದ ಸಣ್ಣಕ್ಕಿ ಅವರ ಕಾರ್ಯಾಲಯದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು ನೇಕಾರ ವೃತ್ತಿಯನ್ನು ಮಾಡದೇ ಇರುವ, ವ್ಯಕ್ತಿಗಳನ್ನು ಆಯ್ಕೆ ಮಾಡಿ ಬಡನೇಕಾರರಿಗೆ ಅನ್ಯಾಯ ಮಾಡಲಾಗಿದೆ. ಜಿಲ್ಲಾಧಿಕಾರಿಗಳು ಮತ್ತು ಜವಳಿ ಇಲಾಖೆ ಉಪನಿರ್ದೇಶಕರು ಈಗಿನ ಆಯ್ಕೆಪಟ್ಟಿಯನ್ನು ರದ್ದುಗೊಳಿಸಿ ಅರ್ಹ ನೇಕಾರರನ್ನು ಆಯ್ಕೆ ಮಾಡಬೇಕೆಂದು ಒತ್ತಾಯಿಸಿದರು.

ಪುರಸಭೆ ಸದಸ್ಯ ಪ್ರಲ್ಹಾದ ಸಣ್ಣಕ್ಕಿ ಮಾತನಾಡಿ ಕುಶಲ ಕರ್ಮಿಗಳ ನೇಕಾರ ವಸತಿ ಯೋಜನೆಯ ಫಲಾನುಭವಿಗಳ ಆಯ್ಕೆಯಲ್ಲಿ ಭಾರಿ ಗೋಲ್‌ಮಾಲ್ ನಡೆದಿದೆ. ಸೌಜನ್ಯ ನೇಕಾರ ಸೊಸೈಟಿಯ ಜಿ.ಎಸ್.ಗೊಂಬಿ ಅವರು ಒಬ್ಬೊಬ್ಬ ಫಲಾನುಭವಿಯಿಂದ ಕನಿಷ್ಠ 20 ರಿಂದ 30 ಸಾವಿರ ಲಂಚ ಪಡೆದು ನೇಕಾರರರು ಅಲ್ಲದ 40ಕ್ಕೂ ಅಧಿಕ ಫಲಾನುಭವಿಗಳಿಗೆ ಮನೆ ಹಂಚಿ ಲಕ್ಷಾಂತರ ಅವ್ಯವಹಾರ ನಡೆಸಿ, ಅರ್ಹ ನೇಕಾರರಿಗೆ ಅನ್ಯಾಯ ಮಾಡಿದ್ದಾರೆ. ನೇಕಾರ ಕಾಲನಿಯಲ್ಲಿನ ಫಲಾನುಭವಿಗಳನ್ನು ಹೊರತುಪಡಿಸಿ ಉಳಿದ 40ಕ್ಕೂ ಅಧಿಕ ಅನರ್ಹ ಪಟ್ಟಿಯನ್ನು ರದ್ದುಗೊಳಿಸಿ, ಅರ್ಹ ನೇಕಾರರಿಗೆ ವಸತಿ ಯೋಜನೆಯ ಸೌಲಭ್ಯ ನೀಡಬೇಕು. ಇಲ್ಲದಿದ್ದರೆ ಬೃಹತ್ ಪ್ರತಿಭಟನೆ ನಡೆಸಲಾಗುವದು ಎಂದು ಪುರಸಭೆ ಮುಖ್ಯಾಧಿಕಾರಿಗಳು, ಜವಳಿ ಇಲಾಖೆ ಉಪನಿರ್ದೇಶಕರು ಮತ್ತು ಜಿಲ್ಲಾಧಿಕಾರಿಗಳಿಗೆ ಆಗ್ರಸಿದರು.

ಪುರಸಭೆ ಸದಸ್ಯರಾದ ಬಸವರಾಜ ಚಮಕೇರಿ, ರವಿ ಜವಳಗಿ, ಮುಖಂಡರಾದ ಮಹಾಲಿಂಗ ಮುದ್ದಾಪೂರ, ಚನ್ನಪ್ಪ ರಾಮೋಜಿ, ಚನ್ನಗೀರಿ ಕೆಳಗಡೆ ಸೇರಿದಂತೆ ಹಲವರು ಇದ್ದರು.

### ದೇವಸ್ಥಾನ ಲೋಕಾರ್ಪಣೆ ನಿಮಿತ್ತ ಧರ್ಮಸಭೆ

# ಅಲ್ಲಮ ನಾಡಿನ ಎಲ್ಲ ದಾರ್ಶನಿಕರಿಗಿಂತ ಶ್ರೇಷ್ಠ-ಮೂರುಸಾವಿರ ಮಠದ ಜಗದ್ಗುರು



**ತೇರದಾಳ :** ವಚನ ಸಾಹಿತ್ಯ ಮೂಲಕ ಬದುಕಿನ ಮೌಲ್ಯ ಮತ್ತು ಸಾಮಾಜಿಕ ಜವಾಬ್ದಾರಿ ಕುರಿತು ಅರಿವು ಮೂಡಿಸಿರುವ ಅಲ್ಲಮಪ್ರಭುದೇವರು ನಾಡಿನ ಎಲ್ಲ ದಾರ್ಶನಿಕರಿಗಿಂತ ಶ್ರೇಷ್ಠರಾದವರು ಎಂದು ಹುಬ್ಬಳ್ಳಿ ಮೂರುಸಾವಿರಮಠದ ಜಗದ್ಗುರು ಗುರುಸಿದ್ಧ ರಾಜಯೋಗಿಂದ್ರ ಶ್ರೀ ಹೇಳಿದರು.

ತೇರದಾಳ ಕ್ಷೇತ್ರಧಿಪತಿ ಅಲ್ಲಮಪ್ರಭುದೇವರ ನೂತನ ಮಂದಿರ ಲೋಕಾರ್ಪಣೆ ಕಾರ್ಯಕ್ರಮದ ಧರ್ಮಸಭೆಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಅಲ್ಲಮಪ್ರಭು ಸಂಚರಿಸಿದ ಕ್ಷೇತ್ರಗಳಲ್ಲಿ ಅವರ ದೇವಸ್ಥಾನ ನಿರ್ಮಿಸುವ ಕಾಯಕವಾಗಿದೆ. ತೇರದಾಳದಲ್ಲಿ ಭಕ್ತರ ದೇಣಿಗೆ ಹಣದಲ್ಲಿ ಚಾಲುಕ್ಯರ ಮಾದರಿಯಲ್ಲಿ ದೇವಸ್ಥಾನ ನಿರ್ಮಿಸಿದ್ದು ನಾಡಿನ ಸಂಸ್ಕೃತಿ ಮತ್ತು ಪರಂಪರೆಯನ್ನು ಹೆಚ್ಚಿಸಿದೆ ಎಂದು ಬಣ್ಣಿಸಿದ ಅವರು, ವಚನ ಸಾಹಿತ್ಯ ಬದುಕಿನ ಪರಿಕಲ್ಪನೆ ಕಟ್ಟಿಕೊಡುವ ಕೆಲಸ ಮಾಡಿದೆ. ಅಲ್ಲಮ ಶಬ್ದಗಳ ಬ್ರಹ್ಮ ಎಂದು ಹೇಳಿದರು.

ನಿಡಸೋಸಿ ಸಿದ್ಧಸಂಸ್ಥಾನಮಠದ ಜಗದ್ಗುರು ಪಂಚಮ ಶಿವಲಿಂಗೇಶ್ವರ ಶ್ರೀ, 12ನೇ ಶತಮಾನದ ಅನುಭವ ಮಂಟಪ, ಮಹಿಳೆಯರಿಗೆ ಆತ್ಮಸ್ಥೈರ್ಯ ತುಂಬುವುದರ ಜತೆಗೆ ಕಾಯಕ ನೀಡಿದ ಕಾಲ. ಜ್ಞಾನವನ್ನು ಬಳಸಿಕೊಂಡಾಗ ಮಾತ್ರ ವ್ಯಕ್ತಿಯ ವ್ಯಕ್ತಿತ್ವ ಹೆಚ್ಚುತ್ತದೆ ಎಂಬುದಕ್ಕೆ ಅಲ್ಲಮ, ಬಸವಣ್ಣ ಅಕ್ಕಮಹಾದೇವಿ ಉದಾಹರಣೆ ಆಗಿದ್ದಾರೆ. ಪ್ರಭುದೇವರ ದೇವಸ್ಥಾನ ನಿರ್ಮಾಣ ಕಾರ್ಯದಲ್ಲಿ ತಾವು ತೊಡಗಿದ್ದೆ ಒಂದು ಸೌಭಾಗ್ಯವಾಗಿದೆ ಎಂದು ಹೇಳಿದರು. ಬೆಂಗಳೂರಿನ ಸಂಸ್ಕೃತ ವಿಶ್ವ ವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲೇಪುರಂ ವೆಂಕಟೇಶ, ತನ್ನನ್ನು ತಾನು ಇಲ್ಲವಾಗಿಸುವುದೆ ಅಲ್ಲಮ. ಅದುವೇ ಶೂನ್ಯವಾಗಿದೆ. ಅಲ್ಲಮ ಎಂಬ ಪದವೇ ಅದ್ಭುತವಾಗಿದೆ. ಅಲ್ಲಮಪ್ರಭು ಗುಹೇಶ್ವರ, ಬಸವಣ್ಣ ಕೂಡಸಂಗಮ ಹಾಗೂ ಅಕ್ಕಮಹಾದೇವಿ ಚನ್ನಮಲ್ಲಿಕಾರ್ಜುನ ನಾಮಾಂಕಿತವನ್ನು ಒಳಗೊಂಡವರು. ಇದವೇ ಅವರ ವ್ಯಕ್ತಿತ್ವ ಎಂದು ಚಿಂತನ ಮಂಡಿಸಿದರು.

ದೇವಸ್ಥಾನ ಜಿರ್ಣೋದ್ದಾರ ಸಮಿತಿ ಅಧ್ಯಕ್ಷ ಹಾಗೂ ಶಾಸಕ ಜಗದೀಶ ಗುಡಗುಂಟಿ ಪ್ರಾಸ್ತಾವಿಕ ಮಾತನಾಡಿ, ದೇವಸ್ಥಾನ ನಿರ್ಮಾಣ ಕಾರ್ಯದಿಂದ ಹಿಡಿದು ಲೋಕಾರ್ಪಣೆ ಕಾರ್ಯಕ್ರಮದ ವರೆಗಿನ ಮಾಹಿತಿಯನ್ನು ತಿಳಿಸಿದರು. ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾತನಾಡಿದರು. ಹಂದಿಗುಂದ ಶಿವಾನಂದ ಶ್ರೀ, ಚಿಮ್ಮಡ ಪ್ರಭು ಶ್ರೀ, ಡಾ. ಮಹಾಂತ ಪ್ರಭು ಶ್ರೀ, ಹಳೆ ಹುಬ್ಬಳ್ಳಿ ನೀಲಕಂಠಮಠದ ಶಿವಶಂಕರ ಶಿವಾಚಾರ್ಯ, ಹಿರೇಮಠದ ಗಂಗಾಧರ ದೇವರು, ಹಿಪ್ಪರಗಿ ಪ್ರಭು ಮಹಾರಾಜರು, ವಿರುಪಾಕ್ಷ ದೇವರು, ಮಹಾವೀರ ಶ್ರೀ, ಪುಷ್ಪಾತಾಯಿ ಗುಡಗುಂಟಿ, ಶಾಸಕ ಸಿದ್ದು ಸವದಿ, ದೇವಸ್ಥಾನ ನಿರ್ಮಿಸಿದ ಶಿಲ್ಪಿ ಚಂದ್ರಶೇಖರ ಹೆಬ್ಬಾರ ದಂಪತಿ ಇನ್ನಿತರಿದ್ದರು. ಲೋಕಾರ್ಪಣೆ ಕಾರ್ಯಕ್ರಮಕ್ಕೆ ಸಹಕರಿಸಿದ ಮಹನೀಯರನ್ನು ಇದೇ ಸಂದರ್ಭದಲ್ಲಿ ಸಮಿತಿ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

# ಉಪಾಧ್ಯಕ್ಷೆಯಾಗಿ ಪದ್ಮಾವತಿ ಭಜಂತ್ರಿ ಅವಿರೋಧ ಆಯ್ಕೆ



**ಚಿಮ್ಮಡ :** ಸ್ಥಳಿಯ ಗ್ರಾಮ ಪಂಚಾಯತಿ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 3 ನೇ ವಾರ್ಡ ಸದಸ್ಯೆ ಶ್ರೀಮತಿ ಪದ್ಮಾವತಿ ಪ್ರಭು ಭಜಂತ್ರಿ ಉಪಾಧ್ಯಕ್ಷೆಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸದಸ್ಯರ ನಡುವೆ ಮಾಡಿಕೊಂಡ ಒಪ್ಪಂದದಂತೆ ಗ್ರಾಮ ಪಂಚಾಯತಿಯ ಹಿಂದಿನ ಉಪಾಧ್ಯಕ್ಷೆ ಶ್ರೀಮತಿ ಪ್ರೇಮಾ ಪ್ರಭು ಗೋವಿಂದಗೋಳ ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿದ ಪ್ರಯುಕ್ತ ತೆರವಾಗಿರುವ ಸ್ಥಾನಕ್ಕೆ ಸೋಮವಾರ ಚುನಾವಣೆ ಘೋಷಣೆಯಾಗಿತ್ತು. ಉಪಾಧ್ಯಕ್ಷ ಸ್ಥಾನ ಪರಿಶಿಷ್ಟ ಜಾತಿ ಮಹಿಳಾ ಅಭ್ಯರ್ಥಿಗೆ ಮೀಸಲಾಗಿದ್ದು, ಚುನಾವಣಾ ಪ್ರಕ್ರಿಯೆಯಲ್ಲಿ ಕೇವಲ ಒಂದೇ ನಾಮಪತ್ರ ಸಲ್ಲಿಕೆಯಾಗಿದ್ದರಿಂದ ನಾಮಪತ್ರ ಸಲ್ಲಿಸಿದ್ದ ಶ್ರೀಮತಿ ಪದ್ಮಾವತಿ ಪ್ರಭು ಭಜಂತ್ರಿಯವರನ್ನು ಉಪಾಧ್ಯಕ್ಷೆಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿಯಾಗಿ ಆಗಮಿಸಿದ್ದ ರಬಕವಿ-ಬನಹಟ್ಟಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಸಿದ್ದಪ್ಪಾ ಪಟ್ಟಿಹಾಳ ಘೋಷಿಸಿದರು.

ಗ್ರಾಂ.ಪಂ. ಮಾಜಿ ಅಧ್ಯಕ್ಷರಾದ ಪ್ರಭು ಪಾಲಭಾವಿ, ಪ್ರಕಾಶ ಪಾಟೀಲ, ಗುರಲಿಂಗಪ್ಪಾ ಪೂಜಾರಿ, ಅಶೋಕ ಮೋಟಗಿ, ತಾ.ಪಂ. ಮಾಜಿ ಉಪಾಧ್ಯಕ್ಷ ಪ್ರಭು ಮುಧೋಳ, ಮನೋಜ ಹಟ್ಟಿ, ಪೈಗಂಬರ ಮೋಪಗಾರ, ರಮೇಶ ಮೇತ್ರಿ, ಮಹಾಂತೇಶ ಜಾಲಿಕಟ್ಟಿ, ಅವ್ವನ್ನಪ್ಪಾ ಮುಗಳಖೋಡ, ಕಾಳು ಬಡಿಗೇರ, ಪ್ರಭು ಗೋವಿಂದಗೋಳ, ಪ್ರಭು ಮುಗಳಖೋಡ, ಶಿವಾನಂದ ದಿನ್ನಿಮನಿ, ಅಭಿವೃದ್ದಿ ಅಧಿಕಾರಿ ಶಿವಾನಂದ ಬಿರಾದಾರ , ಮಹಿಳಾ ಸದಸ್ಯೆಯರು, ಬಿಜೆಪಿ ಮುಖಂಡರು ಸೇರಿದಂತೆ ಹಲವಾರು ಜನ ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ವಕ್ಫ ಬೋರ್ಡ್ ರದ್ದೊಗಳಿಸದಿದ್ದರೆ ದೇಶಕ್ಕೆ ಅಪಾಯ ತಪ್ಪಿದ್ದಲ್ಲ



**ತೇರದಾಳ :** ಹಿಂದು ರೈತರ ಮಠಗಳ ಜಮೀನುಗಳನ್ನು ಪಶ ಪಡಿಸಿಕೊಳ್ಳುತ್ತಿರುವ ವಕ್ಫ ಬೋರ್ಡ್‌ವನ್ನು ರದ್ದುಗೊಳಿಸದಿದ್ದರೆ ದೇಶಕ್ಕೆ ಅಪಾಯ ತಪ್ಪಿದ್ದಲ್ಲ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ತೇರದಾಳ ಶಾಸಕ ಸಿದ್ದು ಸವದಿ ಆರೋಪಿಸಿದರು.

ಸೋಮವಾರ ಪಟ್ಟಣದ ಭೂಪಾಲ ಮಾನಗಾಂವಿ ಅವರ ಜಮೀನಿನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ತೇರದಾಳದಲ್ಲಿ 420 ಎಕರೆ ಸಸಾಲಟ್ಟಿ ಗ್ರಾಮದಲ್ಲಿ 10ಎಕರೆ, ಆಸಂಗಿ ಗ್ರಾಮದಲ್ಲಿ 5ಎಕರೆ, ನಾವಲಗಿ ಗ್ರಾಮದಲ್ಲಿ 9 ಎಕರೆ 16ಗುಂಟೆ ಹಾಗೂ ಹೊಸೂರ ಗ್ರಾಮದಲ್ಲಿ 1ಎಕರೆ36ಗುಂಟೆ ರೈತರ ಜಮೀನುಗಳ ಪಹಣಿಯಲ್ಲಿ ವಕ್ಫ ಬೋರ್ಡ್ ಹೆಸರು ನಮೂದು ಆಗಿದೆ. ಇದನ್ನು ನಾವು ಸಹಿಸುವುದಿಲ್ಲ. ವಿಜಯಪುರ ಜಿಲ್ಲೆಯಲ್ಲಿ ಮಠಗಳನ್ನು ಕೂಡ ಬಿಡುತ್ತಿಲ್ಲ. ದೇಶದಲ್ಲಿ ಸುಮಾರು 33 ಲಕ್ಷ ಎಕರೆ ರೈತರ ಜಮೀನು ವಕ್ಫ ಹೆಸರಿನಲ್ಲಿ ನಮೂದು ಆಗಿದೆ. ಹಿಂದು ರಾಷ್ಟ್ರವನ್ನು ಇಸ್ಲಾಂ ರಾಷ್ಟ್ರ ಮಾಡುವ ಹುನ್ನಾರ ನಡೆದಿದೆ ಎಂದು ಕಿಡಿಕಾರಿದರು. 1971ರಲ್ಲಿ ಟೆನೆಂಟ್, ಇನಾಂ ಹಾಗೂ ವತನ್ ಅಂತಹ ಕಾಯ್ದೆಗಳು ರದ್ದಾದವು. ಆದರೆ ವಕ್ಫ ಬೋರ್ಡ್ ಏಕೆ ರದ್ದಾಗಲಿಲ್ಲ ಎಂದು ಪ್ರಶ್ನಿಸಿದರು. ಈಗ ವಕ್ಫ ಬೋರ್ಡ್‌ನಲ್ಲಿ 42 ಕಾಯ್ದೆಗಳನ್ನು ತಿದ್ದುಪಡಿ ಮಾಡಲು ಮುಂದಾಗಿದ್ದಾರೆ. ಯಾವ ಅಂಶಗಳನ್ನು ತಿದ್ದುಪಡಿ ಮಾಡಲಾಗುತ್ತಿದೆ ಎಂಬುದರ ಬಗ್ಗೆ ಜನರಿಗೆ ಮಾಹಿತಿ ನೀಡಬೇಕು. ಜೆಪಿಸಿ ಸಮಿತಿ ರಾಜ್ಯದ ಬೇಟಿಗೆ ಒಂದು ದಿನಾಂಕ ನಿಗದಿಗೊಳಿಸುತ್ತದೆ. ಈ ಸಂದರ್ಭದಲ್ಲಿ ಅನ್ಯಾಯಕ್ಕೆ ಒಳಗಾದ ರೈತರ ನಿಯೋಗವನ್ನು ತಾವು ಕರೆದುಕೊಂಡು ಸಮಿತಿ ಮುಂದೆ ಹೋಗಲಾಗವುದು ಹಾಗೂ ವಕ್ಫ ಬೋರ್ಡ್ ರದ್ದುಗೊಳಿಸಲೇಬೆಕೆಂದು ಆಗ್ರಹಿಸಲಾಗುವುದು ಎಂದು ಹೇಳಿದರು.

ಬಿಜೆಪಿ ಸರಕಾರ ಇದ್ದಾಗಲೇ ರೈತರಿಗೆ ವಕ್ಫ ಬೋರ್ಡ್ ನೋಟಿಸ್ ಬಂದಿವೆ ಎಂದು ಕಾಂಗ್ರೆಸ್ ಹೇಳುತ್ತಿದೆ. ಆದರೆ ಬಿಜೆಪಿ ಸರಕಾ ಇದ್ದಾಗ ರೈತರಿಗೆ ನೋಟಿಸ್ ಮಾತ್ರ ನೀಡಲಾಗಿತ್ತು. ಆದರೆ ಕಾಂಗ್ರೆಸ್ ಸರಕಾರ ಬಂದ ಬಳಿಕ ಪಹಣಿಯಲ್ಲಿ ವಕ್ಫ ಬೋರ್ಡ್ ಹೆಸರು ಸೇರಿವೆ ಎಂದು ಕಾಂಗ್ರೆಸ್ಸಿನವರಿಗೆ ತಿರುಗೇಟು ನೀಡಿದರು. ಕೇವಲ ಒಂದು ಸಮುದಾಯದ ಓಲೈಕೆಗೆ ನೆಡೆಯುತ್ತಿರುವ ಕಸರತ್ತನ್ನು ನಾವು ಒಪ್ಪುವುದಿಲ್ಲ. ನಮಗೆ ನ್ಯಾಯ ಸಿಗುವವರೆಗೆ ಹೋರಾಟದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಸಿದ್ದು ಸವದಿ ಹೇಳಿದರು.

### ಆಯುರ್ ವಾರ್ 2024 ಕ್ರೀಡಾಹಬ್ಬಕ್ಕೆ ಚಾಲನೆ

# ಶಿಕ್ಷಣದಷ್ಟೇ ಕ್ರೀಡೆಯೂ ಅಷ್ಟೇ ಮುಖ್ಯ: ಹಂಡಿ





**ಬಾಗಲಕೋಟೆ :** ಶೈಕ್ಷಣಿಕ ಶಿಕ್ಷಣದ ಜೊತಗೆ ಕ್ರೀಡೆಯಲ್ಲಿ ಭಾಗವಹಿಸುವುದರಿಂದ ದೈಹಿಕ ಹಾಗೂ ಮಾನಸಿಕ ಬೇಳವಣಿಯಾಗುತ್ತದೆ ಆದ್ದರಿಂದ ಶಿಕ್ಷಣದಷ್ಟೇ ಕ್ರೀಡೆಯೂ ಅಷ್ಟೆ ಮುಖ್ಯವಾಗಿದೆ ಎಂದು ಬಿ.ವಿ.ವಿ.ಸಂಘದ ಸದಸ್ಯರಾದ ಮಲ್ಲಿಕಾರ್ಜುನ ಹಂಡಿ ಹೇಳಿದರು.

ಅವರು ನಗರದ ಬಿ.ವಿ.ವಿ.ಸಂಘದ ಆಟದ ಮೈದಾನದಲ್ಲಿ ಸೋಮವಾರ ನಡೆದ ಆಯುರ್ವೇದ ಮೇಡಿಕಲ್ ಕಾಲೇಜಿನ ವಾರ್ಷಿಕ ಕ್ರೀಡಾಕೂಟ ಅಂಗವಾಗಿ 2024 ಆಯುರ್ ವಾರ್ ಕ್ರೀಡಾಹಬ್ಬಕ್ಕೆ ಕ್ರೀಡಾ ಜ್ಯೋತಿ ಬೇಳಗಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಅವರು ವಿದ್ಯಾರ್ಥಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಪಠ್ಯದ ಜೊತಗೆ ದೈಹಿಕ ಹಾಗೂ ಮಾನಸಿಕವಾಗಿ ಗಟ್ಟಿಗೊಳ್ಳಲು ಕ್ರೀಡಾ ಚಟುವಟಿಗಳು ಅಗತ್ಯವಾಗಿದೆ, ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಗೆಳು ನಮ್ಮೊಳಿಗಿನ ಮನೋವಿಕಾಸವನ್ನು ಉತ್ಕೃಷ್ಟಗೋಳಿಸುತ್ತವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಹಾವಿದ್ಯಾಲಯ ಪ್ರಾಚಾರ್ಯ ಡಾ.ಎಮ್.ಎಸ್.ಹಿರೇಮಠ ಮಾತನಾಡಿ ನಮ್ಮ ದೈಹಿಕ ಶಕ್ತಿ ಸಾಮರ್ಥ್ಯ ಹಾಗೂ ಸದೃಡ ಮನಸ್ಸಿಗೆ ಕ್ರೀಡೆ ಅವಶ್ಯವಾಗಿವೆ ಎಂದರು.

ವೇದಿಕೆ ಮೇಲೆ ಕ್ರೀಡಾ ವಿಭಾಗದ ಕಾರ್ಯದರ್ಶಿ ಡಾ. ಆರ್.ಐ.ಜಂಬಗಿ, ಕ್ರೀಡಾ ಸಂಯೋಜಕ ಡಾ.ಶಿವಕುಮಾರ, ಸೇರಿದಂತೆ ಶಿಕ್ಷಕ ವೃಂದ ಉಪಸ್ಥಿತರಿದ್ದರು. ವಿದ್ಯಾರ್ಥಿನಿ ಪ್ರಜಕ್ತ ಪ್ರಾರ್ಥಿಸಿದರು, ಡಾ.ವಿ.ಎಸ್. ಚೌದರಿ ಸ್ವಾಗತಿಸಿದರು, ಹೊಸಮಠ ಅವರು ಕಾರ್ಯಕ್ರಮ ನಿರೂಪಿಸಿದರು, ಡಾ.ವಿದ್ಯಾಶ್ರೀ ಹಿರೇಮಠ ವಂದಿಸಿದರು.

ಗಮನ ಸೇಳೆದ ಕಲರ್ ಪುಲ್ ಕ್ರೀಡಾಹಬ್ಬ : 2024ರ ಆಯರ್ ವಾರ್ ಕ್ರೀಡಾಹಬ್ಬದ ಬ್ಯಾನರ್ ಅನಾವರಣಗೊಳಸಿ, ಬಲೂನಗಳನ್ನು ಆಕಾಶಕ್ಕೆ ಹಾರಿ ಬಿಡಲಾಯಿತು.

ಇದೆ ವೇಳೆ ಬೈಕ್ ಹಾಗೂ ಕಾರಿನ ಮೇಲೆ ವಿಜಯದ ಕಪ್ ಗಳನ್ನು ಮೇರವಣಿಗೆ ಮೂಲಕ ತರಲಾಯಿತು, ನಂತರದಲ್ಲಿ ವಿದ್ಯಾರ್ಥಿಗಳಿಂದ ಸಮೂಹ ನೃತ್ಯ ಪ್ರದರ್ಶನ ಎಲ್ಲರ ಗಮನ ಸೆಳೆಯಿತು.

# ಬಿ.ವಿ.ವಿ.ಸಂಘ ನಾಡಿನ ಅತಿ ದೊಡ್ಡ ಜ್ಞಾನದ ಕ್ಷೀತಿಜವಿದ್ದಂತೆ: ಡಾ. ಸಣ್ಣವೀರಣ್ಣ ದೊಡ್ಡಮನಿ



**ಬಾಗಲಕೋಟೆ :** ಅಕ್ಷರ ಪ್ರಜ್ಞೆಯ ಲೋಕಕ್ಕೆ ತಮ್ಮನ್ನು ತಾವು ಸಮರ್ಪಸಿಕೊಂಡ ಜ್ಞಾನದ ನಕ್ಷತ್ರಗಳನ್ನು ಆರಾಧಿಸುವ ಒಂದು ಕೀರ್ತಿ ಬಿ.ವಿ.ವಿ.ಸಂಘಕ್ಕೆ ಇದೆ, ಇಗಾಗಿ ಇದು ಕನ್ನಡ ನಾಡಿನ ಅತಿ ದೊಡ್ಡ ಜ್ಞಾನದ ಕೀತಿಜವಾಗಿದೆ ಎಂದು ಎಂದು ಕನ್ನಡ ಅಭಿವೃದ್ದಿ ಪ್ರಾಧಿಕಾರದ ಸಶಕ್ತ ಭಾಷಾನೀತಿ ತಜ್ಞರ ಸಮೀತಿಯ ಸದಸ್ಯರಾದ ಡಾ. ಸಣ್ಣವೀರಣ್ಣ ದೊಡ್ಡಮನಿ ಹೇಳಿದರು.

ಅವರು ನಗರದ ಬಿ.ವಿ.ವಿ.ಸಂಘದ ಬಸವೇಶ್ವರ ವಾಣೀಜ್ಯ ಮಹಾವಿದ್ಯಾಲಯಲ್ಲಿ ಐಕ್ಯೂಎಸಿ ಹಾಗೂ ವಾಣಿಜ್ಯ ಕಾಲೇಜಿನ ಸಹಯೋಗದಲ್ಲಿ ಶನಿವಾರ ನೂತನ ಸಭಾಭವನದಲ್ಲಿ ನಡೆದ 2024-25 ನೇ ಸಾಲಿನ ಕ್ರೀಡಾ, ಸಾಂಸ್ಕೃತಿಕ ಹಾಗೂ ವಿವಿಧ ಚಟುವಟಿಕೆಗಳ ಉದ್ಘಾಟನಾ ಸಮಾರಂಭವನ್ನು ಜ್ಯೋತಿ ಬೇಳಗಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಸಿ.ಎಸ್ ನಂದಿಮಠ, ಬಿ.ಕೆ.ಹಿರೇಮಠ, ಡಾ.ಗುರುಲಿಂಗ ಕಾಪಸೆ ಅವರಂಥ ವಿದ್ವಾಂಸರನ್ನು ಹೊಂದಿದ ಬಿ.ವಿ.ವಿ.ಸಂಘ ಇಂದು ಜಾತಿ ಬೇದವಿಲ್ಲದೆ ಶಿಕ್ಷಕ ನೀಡುತ್ತಿದೆ, ಹಿಂದುಳಿದ ವರ್ಗದವರು ಹಾಗೂ ಅಲೆಮಾರಿಗಳಿಗೂ ಸ್ಥಾನಮಾನ ಸಿಗಬೇಕು ಅವರು ಬೇಳೆಯಬೇಕು ಎಂಬ ಮನೋಭಾವನೆಯನ್ನು ಹೊಂದಿದ ಡಾ.ವೀರಣ್ಣ ಚರಂತಿಮಠ ಅವರ ಕಾರ್ಯಾಧ್ಯಕ್ಷತೆಯ ನೇತೃತ್ವದಲ್ಲಿ ರಾಷ್ಟ್ರದ್ದೂಕ್ಕು ತನ್ನ ಜ್ಞಾನದ ಬೇಳಕನ್ನು ಪ್ರಸ-ರಿಸಿದೆ, ವಿದ್ಯಾರ್ಥಿಗಳು ಪ್ರವೇಶಗೊಳ್ಳುವಂತ ಈ ನೆಲದ ಶಾಲೆ, ಕಾಲೇಜು ಮತ್ತು ಆ ವಿದ್ಯಾ ಸಂಸ್ಥೆಯ ಮಹತ್ವ ತಿಳಿದುಕೊಂಡಾಗ ಅಭಿನಾಭಾವತೆ, ಅಭಿಮಾನ, ಅನ್ಯುನ್ಯತೆ ಆ ಪ್ರೀತಿ ಅವರಿಗೆ ಇಲ್ಲಿ ಸಿಗುತ್ತದೆ, ಇದರಿಂದ ಮನಸ್ಸು ಅರಳಿ ಜ್ಞಾನ ಮೂಡುತ್ತದೆ, ವಾಣಿಜ್ಯ ವಿದ್ಯಾರ್ಥಿಗಳು ತಾವು ಕಲಿಯುವ ಶಿಕ್ಷಣ ತಮ್ಮ ಹೃದಯದ ಕನ್ನಡಿಯಿದ್ದಂತೆ ಎಂದ ಅವರು ಇಂದಿನ ಕಾಲದಲ್ಲಿ ವಿದ್ಯಯನ್ನು ಆರಾಧಿಸುವ ಮನುಸ್ಸುಗಳ ಅವಲೋಕನ ಅಗತ್ಯವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಮಹಾವಿದ್ಯಾಲಯಪ್ರಾಚಾರ್ಯಡಾ.ಜಗನ್ನಾಥ ಚವ್ಹಾಣ ಮಾತನಾಡಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಶಿಕ್ಷಣದ ಜೋತೆಗೆ ಸಾಂಸ್ಕೃತಿಕ ಚಟುವಟಿಗೆಳು ತುಂಬಾನೆ ಅಗತ್ಯ ಎಂದರು.

ಇದೆ ಸಂದರ್ಭದಲ್ಲಿನ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರಾದ ಪಿ.ಎನ್.ರಾಠೋಡ, ಹಾಗೂ ಕೆಸೆಟ್ಟಪಾಸಾದ ಪ್ರಯುಕ್ತ ಮುನಿರ್ ಹುನಗುಂದ ಇವರಿಗೆ ಸನ್ಮಾನಿಸಿ ಗೌರವಿಸಲಾಯಿತು. ವೇದಿಕೆ ಮೇಲೆ ಪ್ರೋ.ನಂಜುಂಡಸ್ವಾಮಿ, ಕ್ರೀಡಾವಿಭಾಗದ ಡಾ.ಎಸ್.ಎಸ್,ಕೋಟ್ಯಾಳ, ಸಾಂಸ್ಕೃತಿಕ ವಿಭಾಗದ ರಾಜು ಮೇಲಿನಮನಿ, ಐಕ್ಯೂಎಸಿ ಸಂಯೋಜಕಿ ಜಿ.ಎಂ.ನಾವದಗಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು, ನಂತರದಲ್ಲಿ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.

# ಕನ್ನಡನಾಡಿನ ವೀರವನಿತೆಯರ ಸಂಕೇತ ಒನಕೆ ಓಬವ್ವ



**ಬಾಗಲಕೋಟೆ :** ಒನಕೆ ಓಬವ್ವ ಕನ್ನಡ ನೆಲದ ವೀರವನಿತೆಯರ ಸಂಕೇತವಾಗಿದ್ದು,ಅವಳ ದೇಶಪ್ರೇಮ ಯುವಶಕ್ತಿಗೆ ಪ್ರೇರಣೆ ಎಂದು ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಹೇಳಿದರು.

ಅವರು ನಗರದ ಶಿವಾನಂದ ಜೀನಲ್ಲಿರುವ ಬಿಜೆಪಿ ಕಾರ್ಯಾಲಯದಲ್ಲಿ ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದಿಂದ ಹಮ್ಮಿಕೊಂಡ ವೀರವನಿತೆ ಒನಕೆ ಓಬವ್ವ ಜಯಂತಿ ಕಾರ್ಯಕ್ರಮದಲ್ಲಿ ಒನಕೆ ಓಬವ್ವ ಭಾವಚಿತ್ರಕ್ಕೆ ಪುಷ್ಪಾಂಜಲಿ ಸಲ್ಲಿಸುವ ಮೂಲಕ ಗೌರವ ನಮನ ಸಲ್ಲಿಸಿ ಮಾತನಾಡಿದರು.

ಹೈದರಾಲಿಯ ಸೈನ್ಯದೊಂದಿಗೆ ಏಕಾಂಗಿಯಾಗಿ ಹೋರಾಡಿದ ವೀರವನಿತೆ ಒನಕೆ ಓಬವ್ವ, ಆಕೆಯ ಸಾಹಸ ಮುಂದಿನ ಪೀಳಿಗೆಗೂ ಸಾರುವಂತದ್ದು.

ಅಂತಹ ಧೀರ ಮಹಿಳೆ ಜನಿಸಿದ ನಾಡಿದು ಮತ್ತು ಬೆಳವಡಿ ಮಲ್ಲಮ್ಮ,ಕಿತ್ತೂರ ಚೆನ್ನಮ್ಮ,ಕೇಳದಿ ಚೆನ್ನಮ್ಮ, ಇವರೆಲ್ಲ ಈ ನೇಲದ ವೀರವನಿತೆಯರ ಸಂಕೇತವಾಗಿದ್ದಾರೆ, ಇಂಥ ವೀರನಾರಿಯರನ್ನು ಪಡೆದ ಈ ಭೂಮಿ ನಿಜಕ್ಕೂ ಶ್ರೇಷ್ಠ ಎಂದರು.

ಶಿವಾನಂದ ಟವಳಿ ಪ್ರಸ್ತಾವಿಕ ಮಾತನಾಡಿ ಒನಕೆ ಓಬವ್ವ ಜೀವನ ಚರಿತ್ರೆಯನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಿಟಿಡಿಎ ಮಾಜಿ ಅಧ್ಯಕ್ಷ ಜಿ.ಎನ್.ಪಾಟೀಲ, ಡಾ.ಎಂ.ಎಸ್.ದಡ್ಡೆನ್ನವರ, ಬಸವರಾಜ ಯಂಕಂಚಿ,ರಾಜು ರೇವಣ-ಕರ,ಸತ್ಯನಾರಾಯಣ ಹೇಮಾದ್ರಿ,ನಗರಸಭೆ ಅಧ್ಯಕ್ಷೆ ಸವಿತಾ ಲಂಕೆನ್ನವರ,ಶಿವಲೀಲಾ ಪಟ್ಟಣಶೆಟ್ಟಿ,ಶಶಿಕಲಾ ಮಜ್ಜಗಿ,ಬಸವರಾಜ ಹುನಗುಂದ,ಉಮೇಶ ಹಂಚಿನಾಳ,ಸೇರಿದಂತೆ ಅನೇಕರು ಇದ್ದರು.

ಪೋಟೋ 01 ಒನಕೆ ಓಬವ್ವ ಭಾವಚಿತ್ರಕ್ಕೆ ಪುಷ್ಪಾಂಜಲಿ ಸಲ್ಲಿಸುವ ಮೂಲಕ ಗೌರವ ನಮನ ಸಲ್ಲಿಸಿದರು.

# ಲೈನ್ಸ್ ಸಂಸ್ಥೆ ವತಿಯಿಂದ ವಿಶ್ವ ಶಾಂತಿ ಸಂದೇಶ ಸಾರುವ ಚಿತ್ರಕಲಾ ಸ್ಪರ್ಧೆ



**ಬಾಗಕಕೋಟೆ :** ಲ0ಯನ್ಸ್ ಕ್ಲಬ್ ಬಾಗಲಕೋಟೆ ಆಶ್ರಯದಲ್ಲಿ ಪ್ರಾಥ-'ಮಿಕ ಶಾಲೆ0ಯ ವಿದ್ಯಾರ್ಥಿಗಳಿಗೋಸ್ಕರ ವಿಶ್ವ ಶಾಂತಿ ಸಂದೇಶ ಸಾರುವ ಚಿತ್ರಕಲಾ ಸ್ಪರ್ಧೆ0ಯನ್ನು ವಿದ್ಯಾಗಿರಿ 0ಯಲ್ಲಿರುವ ಬ. ವಿ.ವ.ಸಂಘದ ಪಿ 0ಯು ಸಿ ಕಾಲೇಜ್‌ನಲ್ಲಿ ಏರ್ಪಡಿಸಿದ್ದರು. ಸ್ಪರ್ಧೆ0ಯಲ್ಲಿ ನಗರ ಹಾಗೂ ಜಿಲ್ಲೆ0ಯ ವಿವಿಧ ಶಾಲೆಗಳಿಂದ ಸುಮಾರು 200 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಫೀಸ್ ಪೋಸ್ಟರ್ ಕಾಂಪಿಟೇಶನ್ ಅನ್ನುವ ಈ ಕಾ0ರ್ಯಕ್ರಮದಲ್ಲಿ ಆರನೇ ಕ್ಲಾಸಿನಿಂದ 8ನೇ ಕ್ಲಾಸಿನವರೆಗಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾ0ರ್ಯಕ್ರಮವನ್ನು ಚಿತ್ರಕಲಾ ಶಿಕ್ಷಕ ಬಿ.ವಿ. ಅಬಾನವರು ಸುಂದರ ಚಿತ್ರ ಬಿಡಿಸುವುದರೊಂದಿಗೆ ಉದ್ಘಾಟಿಸಿದರು. ಕಾ0ರ್ಯಕ್ರಮದಲ್ಲಿ ಲೈನ್ ಸಂಸ್ಥೆ ಅಧ್ಯಕ್ಷೆ ಲ0ಯನ್ ಸಿದ್ದಣ್ಣ ಹಂಪನಗೌಡರ್ ಸ್ವಾಗತಿಸಿದರು ವೇದಿಕೆ ಮೇಲೆ ಬಸವೇಶ್ವರ ಪಿ0ಯು ಕಾಲೇಜಿನ ಪ್ರಾಚಾ0ರ್ಯ ವಟವಟಿ, ಲ0ಯನ್ಸ್ ಸಂಸ್ಥೆ0ಯ ರಿಸನ್ ಚೇರ್ಮನ್ ಆಗಿರುವ ಲ0ಯನ್ ಮಲ್ಲಿಕಾರ್ಜುನ್ ಸಾಸನೂರ,ಕಾ0ರ್ಯದರ್ಶಿ ಲ0ಯನ್ ವಿಶ್ವನಾಥ ಗುಳೇದ , ಖಜಾಂಚಿ ಲ0ಯನ್ ಹಣಮಂತ ದೊಡಮನಿ, ಲ0ಯನ್ ಶ್ರೀಮತಿ ಶಿಲ್ಪಾ ಅಕ್ಕಿಮರಡಿ ಮತ್ತು ನಿರ್ಣಾ0ಯಕರಾಗಿ ಆಗಮಿಸಿರುವ ಚಿತ್ರಕಲಾ ಶಿಕ್ಷಕರಾದ ಶ್ರೀಮತಿ ಭಾರತಿ ನಾಶಿ ಹಾಗೂ ಬಿ.ವಿ. ಅಬಾನವರ ಉಪಸ್ಥಿತರಿದ್ದರು.

ಕಾ0ರ್ಯಕ್ರಮವನ್ನು ಲ0ಯನ್ ಲಿಂಗರಾಜ್ ವೈದ್ಯನಿರೂಪಿಸಿದರು. ಲ0ಯನ್ಸ್ ಸಂಸ್ಥೆ0ಯ ಅನೇಕ ಸದಸ್ಯರು, ಪದಾಧಿಕಾರಿಗಳು ಹಾಗೂ ಕಾಲೇಜಿನ ಸಿಬ್ಬಂದಿ0ಯವರು ವಿದ್ಯಾರ್ಥಿಗಳು ಮತ್ತು ಪಾಲಕರು ಭಾಗವಹಿಸಿದ್ದರು. ಪುಟ್ಟ ಮಕ್ಕಳು ಅತ್ಯಂತ ಸುಂದರವಾಗಿ ತಮ್ಮ-ತಮ್ಮ ಆಲೋಚನೆಗಳಿಗೆ ತಕ್ಕಂತೆ ಚಿತ್ರವನ್ನು ಬಿಡಿಸಿದರು. ಚಿತ್ರಕಲೆ0ಯ ಕಲಾಕಾರನ ಮನಸ್ಸಿನ ಭಾವನೆ0ಯನ್ನು ಚಿತ್ರ ರೂಪದಲ್ಲಿ ಹೊರಹೊಮ್ಮುವುದು ಅನ್ನುವ ಸಂದೇಶವನ್ನು ಎಲ್ಲ ಪುಟ್ಟ ಮಕ್ಕಳು ವ್ಯಕ್ತಪಡಿಸಿದರು.

ಸ್ಪರ್ಧೆ0ಯ ನಂತರ ಎಲ್ಲ ಮಕ್ಕಳಿಗೂ ಕೇಕ್ ವಿತರಿಸಲಾಯಿತು. ಇಲ್ಲಿ ವಿಜೇತರಾದ ಮೂರು ಮಕ್ಕಳ ಚಿತ್ರಗಳನ್ನು ಲೈನ್ ಸಂಸ್ಥೆ0ಯ ಜಿಲ್ಲಾ ಹಾಗೂ ಅಂತರಾಷ್ಟ್ರೀ0ಯ ಮಟ್ಟಕ್ಕೆ ಕಳುಹಿಸಿಕೊಡಲಾಗುವುದು ಎಂದು ಅಧ್ಯಕ್ಷರು ತಿಳಿಸಿದರು. ಅಲ್ಲಿ0ಯೂ ಕೂಡ ಈ ಚಿತ್ರಗಳು ಆ0ಯ್ಕೆ0ಯಾದರೆ ಅವುಗಳಿಗೂ ಸೂಕ್ತ ಬಹುಮಾನವನ್ನು ಕೊಡಲಾಗುವುದು. ಲೈನ್ ಸಂಸ್ಥೆ0ಯ ಮಕ್ಕಳ ಪ್ರತಿಭೆ0ಯನ್ನು ಹೊರಹೊಮ್ಮಿಸುವ ಈ ಕಾ0ರ್ಯವನ್ನು ಪ್ರಾಚಾ0ರ್ಯರು ಶ್ಲಾಘಿಸಿದರು.

ಕಾ0ರ್ಯಕ್ರಮದಲ್ಲಿ ಲ0ಯನ್ ಸಂಸ್ಥೆ0ಯ ಸದಸ್ಯರಾದ ಅಪ್ಪಾಸಾಹೇಬ್ ಬುರ್ಲಿ ರಂಗಣ್ಣ ದಂಡಣ್ಣವರ್, ಲ0ಯನ್ ಡಾ. ಮನ್ನಾಪುರ, ವೀರೇಶ್ ರೋಣದ, ಡಾ.ರಾಘವೇಂದ್ರ ವನಕಿ ಲಾ0ಯನ ದೀಪಾ ಶೀಲವಂತ ,ಹಾಗೂ ಅನೇಕ ಸದಸ್ಯರು ಉಪಸ್ಥಿತರಿದ್ದರುಕಾ0ರ್ಯಕ್ರಮಕ್ಕೆ ಸಹಕರಿಸಿದ ಲಾ0ಯನ್ ಲಿಂಗರಾಜ್ ವೈದ್ಯ ವಂದಿಸಿದರು.

## ಫ್ರೀ 33 ಜಿವಿ ಮವಲಂಕರ್‌ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಶಿಪ್‌ದಲ್ಲಿ ಎನ್‌ಸಿಸಿ ಕೆಡೆಟ್‌ಆಕಾಶ ಗುಡಗೇನಟ್ಟಿಗೆಚಿನ್ನದ ಪದಕ

# ರಾಜ್ಯಕ್ಕೆಕೀರ್ತಿತಂದಯುವ ಶೂಟರ್‌ಆಕಾಶ ಗುಡಗೇನಟ್ಟಿ



**ಬೆಳಗಾವಿ :** ಕೆಎಲ್‌ಇ ಸಂಸ್ಥೆಯ ಲಿಂಗರಾಜಕಾಲೇಜಿನ ಬಿಎ ವಿದ್ಯಾರ್ಥಿ ಹಾಗೂ ಎನ್‌ಸಿಸಿ ಘಟಕದಸೀನಿಯರ್ ಅಂಡರ್‌ಆಫೀಸರ್‌ಆಕಾಶ ಸತೀಶ್‌ಗುಡಗೇನಟ್ಟಿಕೇರಳದ ತಿರುವನಂತಪುರಂನಲ್ಲಿ ಇಂದು ಜರುಗಿದ33ನೇ ಜಿವಿ ಮವಲಂಕರ್‌ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಶಿಫ್‌ಹಾಗೂ ನ್ಯಾಷನಲ್‌ರೈಫಲ್ ಅಸೋಸಿಯೇಷನ್ ಆಫ್‌ಇಂಡಿಯಾ(ಖಋಈಐ) ಹಮ್ಮಿಕೊಂಡಿದ್ದ ಶೂಟಿಂಗ್‌ದಲ್ಲಿಚಿನ್ನದ ಪದಕವನ್ನು ಪಡೆದುಅದ್ವಿತೀಯ ಸಾಧನೆ ಮಾಡಿದ್ದಾನೆ. ಶೂಟಿಂಗ್‌ದಲ್ಲಿ600 ಅಂಕಗಳಲ್ಲಿ 535 ಅಂಕಗಳನ್ನು ಪಡೆಯುವ ಮೂಲಕ ಚಿನ್ನದ ಪದಕ ತನ್ನದಾಗಿಸಿಕೊಂಡಿದ್ದಾನೆ.
ಭಾರತಾದ್ಯಂತದ 18 ಯುವ ಶೂಟರ್‌ಗಳು ಅಂತಿಮ ಹಂತದಸ್ಪರ್ಧಿಸಿದ್ದರು. ಈಕಠಿಣಶೂಟಿಂಗ್ ಪಂದ್ಯಾವಳಿಯಲ್ಲಿ ಆಕಾಶ್ ಗುಡಗೇನಟ್ಟಿ ಅವರುಅದ್ಭುತ ಶೂಟಿಂಗ್ ಕೌಶಲವನ್ನು ತೋರ್ಪಡಿಸಿಚಿನ್ನಕ್ಕೆ ಕೊರಳೊಡ್ಡಿದ್ದರೆ,ಜೂನಿಯರ್ ವಿಭಾಗದಲ್ಲಿಯೂಅಷ್ಟೇ ಕಠಿಣ ಸ್ಪರ್ಧೆಯನ್ನು ಎದುರಿಸಿ ಆಕಾಶ್ ಮತ್ತೊಂದುಚಿನ್ನದ ಪದಕವನ್ನು ತಮ್ಮದಾಗಿಸಿಕೊಂಟಿದ್ದಾರೆ. 26 ಕರ್ನಾಟಕ ಎನ್‌ಸಿಸಿ ಬಟಾಲಿಯನ್ ಎನ್‌ಸಿಸಿ ಕೆಡೆಟ್‌ಆಗಿರುವಕೆಡೆಟ್‌ಆಕಾಶ ಜಿವಿ ಮವಲಂಕರ್‌ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಶಿಫ್‌ದಜೂನಿಯರ್ ಹಾಗೂ ಸೀನಿಯರ್ ಎರಡು ಶೂಟಿಂಗ್ ವಿಭಾಗದಲ್ಲಿಚಿನ್ನದ ಪದಕವನ್ನು ಗಳಿಸುವ ಮೂಲಕ ಈ ಸಾಧನೆ ಮಾಡಿದರಾಜ್ಯದಪ್ರಥಮಎನ್‌ಸಿಸಿ ಕೆಡೆಟ್ ಎಂಬ ಅಭಿದಾನಕ್ಕೆ ಪಾತ್ರನಾಗಿರಾಜ್ಯಕ್ಕೇಕೀರ್ತಿಯನ್ನುತಂದಿದ್ದಾರೆ.
ಜುಲೈದಲ್ಲಿ ತಮಿಳುನಾಡಿನಲ್ಲಿ ಜರುಗಿದ ನವದೆಹಲಿ ಡಿಜಿಎನ್‌ಸಿಸಿ ಶೂಟಿಂಗ್ ಚಾಂಪಿಯನಶಿಫ್‌ದಲ್ಲಿಯೂ ಅಗ್ರ ಶ್ರೇಯಾಂಕವನ್ನು ಪಡೆದುಕೊಂಡು 33ನೇ ಜಿ.ವಿ.ಮವಲಂಕರ್‌ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಶಿಫ್‌ಗೆ ಆಯ್ಕೆಯಾಗಿದ್ದು ವಿಶೇಷವಾಗಿತ್ತು. ವಿದ್ಯಾರ್ಥಿಯ ಈ ಸಾಧನೆಗೆಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಡಾ.ಪ್ರಭಾಕರಕೋರೆ, ಬೆಳಗಾವಿ ಗ್ರುಫ್ ಕಮಾಂಡರ್‌ಕರ್ನಲ್ ಮೋಹನ್ ನಾಯ್ಕ, ನಿವೃತ್ತಕರ್ನಲ್‌ಎಸ್. ದರ್ಶನ್, 26 ಕರ್ನಾಟಕ ಎನ್‌ಸಿಸಿ ಬಟಾಲಿಯನ್‌ಕಮಾಡಿಂಗ್‌ಆಫೀಸರ್‌ಲೆಫ್ಟನಂಟ್‌ಕರ್ನಲ್‌ಸುನೀಲ ದಾಗರ, ಎಡಮ್‌ಆಫೀಸರ್ ಲೆಫ್ಟನಂಟ್‌ಕರ್ನಲ್ ಸಿದ್ಧಾರ್ಥ ರೆಡೂಶಂಕರಯಾದವ್, ಸುಬೇದಾರ್ ಮೇಜರ್‌ಕಲ್ಲಪ್ಪಾ ಪಾಟೀಲ, ಕೆಎಲ್‌ಇಜಂಟಿ ಕಾರ್ಯದರ್ಶಿ ಡಾ.ಪ್ರಕಾಶ್ ಕಡಕೋಳ, ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಎಸ್. ಮೇಲಿನಮನಿ, ಪಿಯು ಪ್ರಾಚಾರ್ಯೆಗಿರಿಜಾ ಹಿರೇಮಠ,ಕಾಲೇಜಿನ ಎನ್‌ಸಿಸಿ ಅಧಿಕಾರಿಕ್ಯಾಪ್ಟನ್‌ಡಾ.ಮಹೇಶ ಗುರನಗೌಡರ ಹಾಗೂ ಸಿಬ್ಬಂದಿವರ್ಗದವರುಅಭಿನಂದನೆ ಸಲ್ಲಿಸಿದ್ದಾರೆ.

## ಮನವಿ ಪತ್ರದ ಸಹಿಗಳ ದುರ್ಬಳಕೆ: ಹಿಂದುಳಿದ ವರ್ಗಗಳ ಇಲಾಖೆಯ ಜಿಲ್ಲಾ ಅಧಿಕಾರಿ ಶಿವಪ್ರಿಯಾ ಸ್ಪಷ್ಟನೆ

**ಬೆಳಗಾವಿ :** ಇಲಾಖೆಯ ಸಿಬ್ಬಂದಿಗೆ ಕಿರುಕುಳ ನೀಡಲಾಗುತ್ತಿದೆ ಎಂಬ ಆರೋಪವು ಸತ್ಯ-ಕ್ಕೆ ದೂರವಾಗಿದ್ದು, ದೂರುಪತ್ರವೊಂದಕ್ಕೆ ಬಳಸಲಾಗಿರುವ ಸಹಿಗಳು ಕೂಡ ಇದಕ್ಕೆ ಸಂಬಂಧಿಸಿರುವುದಿಲ್ಲ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಶಿವಪ್ರಿಯಾ ಕಡೇಚೂರ ಅವರು ಸ್ಪಷ್ಟಪಡಿಸಿದ್ದಾರೆ.
ಈ ಕುರಿತು ಪ್ರಕಟಣೆ ನೀಡಿರುವ ಅವರು, ದಿನಾಂಕ 5-11-2024 ರಂದು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ಆಯೋಜಿಸಲಾಗಿತ್ತು. ಆ ಸಂದರ್ಭದಲ್ಲಿ ಇಲಾಖೆಯ ವಸತಿನಿಲಯಗಳ ಮೆನು ಹಾಗೂ ಡಯಟ್ ಬದಲಾವಣೆಗೆ ಸಂಬಂಧಿಸಿದಂತೆ ಮಾನ್ಯ ಸಚಿವರಿಗೆ ಸಲ್ಲಿಸಲು ಸಿದ್ಧಪಡಿಸಲಾಗಿದ್ದ ಮನವಿಪತ್ರಕ್ಕೆ ಮಾಡಲಾಗಿರುವ ಸಹಿಗಳನ್ನೇ ದುರ್ಬಳಕೆ ಮಾಡಿಕೊಂಡು ಇದ-ಕ್ಕೆ ಸಂಬಂಧವಿಲ್ಲದ ದೂರುಪತ್ರಕ್ಕೆ ಬಳಕೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.
ಇಲಾಖೆಯ ಸಿಬ್ಬಂದಿ ಅಥವಾ ವಸತಿನಿಲಯಗಳ ಮೇಲ್ವಿಚಾರಕರಿಗೆ ಯಾವುದೇರೀತಿಯ ಕಿರುಕುಳ ನೀಡಿರುವುದಿಲ್ಲ. ಇಲಾಖೆಯ ಪ್ರತಿಯೊಂದು ಕೆಲಸವನ್ನು ಸರಕಾರದ ನಿಯಮ ಮತ್ತು ಮಾರ್ಗಸೂಚಿಯ ಪ್ರಕಾರವೇ ನಿರ್ವಹಿಸಲಾಗುತ್ತಿದೆ. ಹಲವಾರು ದಿನಗಳಿಂದ ವಿನಾಕಾರಣ ತಮಗೆ ಕಿರುಕುಳ ನೀಡಲಾಗುತ್ತಿದ್ದು,
ಆದಾಗ್ಯೂ ಇಲಾಖೆಯ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಲಾಗುತ್ತಿದೆ ಎಂದು ಶಿವಪ್ರಿಯಾ ಕಡೇಚೂರ ತಿಳಿಸಿದ್ದಾರೆ.

### ಅಲ್ಲಮಪ್ರಭು ನೂತನ ಮಂದಿರ ಲೋಕಾರ್ಪಣೆ ಕಾರ್ಯಕ್ರಮ ಸಂಪನ್ನ । ಹಿಂದೆಂದೂ ಕಾಣದ ಅಭೂತಪೂರ್ವ ಕಾರ್ಯಕ್ರಮ

# 21 ಸಾವಿರ ಭಕ್ತರಿಂದ ಪ್ರಭುದೇವರ 11 ವಚನ ಹೇಳಿಕೆ!



**ತೇರದಾಳ :** ಅಕ್ಟೋಬರ್ 14ರಿಂದ ನ.11ರ ವರೆಗೆ ನಿರಂತರವಾಗಿ ನಡೆದ ತೇರದಾಳ ಕ್ಷೇತ್ರಾಧಿಪತಿ ಅಲ್ಲಮಪ್ರಭುದೇವರ ನೂತನ ದೇವಸ್ಥಾನ ಲೋಕಾರ್ಪಣೆ ಕಾರ್ಯಕ್ರಮ ಸೋಮವಾರ ರಾತ್ರಿ 21 ಸಾವಿರ ಭಕ್ತರಿಂದ ಅಲ್ಲಮಪ್ರಭುದೇವರ 11 ವಚನಗಳನ್ನು ಏಕಕಾಲಕ್ಕೆ ಹೇಳುವ ಮೂಲಕ ಸಂಪನ್ನಗೊಂಡಿತು.
ಬೆಳಗಾವಿ ಶೇಗುಣಸಿ ವಿರಕ್ತಮಠದ ಡಾ. ಮಹಾಂತಪ್ರಭು ಶ್ರೀಗಳ ನೇತೃತ್ವದಲ್ಲಿ ನಡೆದ ವಚನ ವಂದನ ಕಾರ್ಯಕ್ರಮಕ್ಕೆ ಆಗಮಿಸಿದ್ದ ರಾಜ್ಯ ಅಂತರಾಜ್ಯದಿಂದ ಸಹಸ್ರಾರು ಭಕ್ತಾಧಿಗಳು, ಶ್ರೀಗಳು ಒಂದೊಂದಾಗಿ ಹನ್ನೊಂದು ಅಲ್ಲಮಪ್ರಭುದೇವರ ವಚನಗಳನ್ನು ಹೇಳುತ್ತಿದ್ದ ಭಕ್ತರು ಕೂಡ ಅವುಗಳನ್ನು ಹೇಳಿದ್ದು ಹೊಸ ಇತಿಹಾಸವನ್ನು ಸೃಷ್ಠಿಸಿತು. ಹಂದಿಗುಂದದ ಶಿವಾನಂದ ಶ್ರೀ, ಹಳೇ ಹುಬ್ಬಳಿ ನೀಲಕಂಠ ಮಠದ ಶಿವಶಂಕರ ಶಿವಾಚಾರ್ಯ, ಚಿಮ್ಮಡದ ಪ್ರಭು ಶ್ರೀ, ಹಿರೇಮಠದ ಗಂಗಾಧರ ದೇವರು, ತೆಲಂಗಾಣದ ವಿರುಪಾಕ್ಷ ದೇವರು ಇಂತಹ ಅಭೂತಪೂರ್ವ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.
ಯಶ್ವಿಯಾದ ಕಾರ್ಯಕ್ರಮ-ಭಕ್ತರ ದೇಣಿಗೆ ಹಣದಲ್ಲಿ ನಿರ್ಮಾಣಗೊಂಡಿರುವ ಅಲ್ಲಮಪ್ರಭುದೇವರ ನೂತನ ಮಂದಿರ ಲೋಕಾರ್ಪಣೆ ಕಾರ್ಯಕ್ರಮ ನಿರೀಕ್ಷೆಗೂ ಮೀರಿ ಯಶಸ್ವಿಯಾಯಿತು. ಅ.14ರಂದು ಪ್ರಭು ಪರಂಜ್ಯೋತಿ ಆಗಮನದೊಂದಿಗೆ ಪ್ರಾರಂಭಗೊಂಡ ಕಾರ್ಯಕ್ರಮ, ಬಸವ ಪುರಾಣ, ರೈತ, ಸೈನಿಕ ಸಮಾವೇಶ ಸಮಾವೇಶ, ಯುವಜನೋತ್ಸವ, ಜನಪದ ಸಂಭ್ರಮ, ಅಲ್ಲಮಪ್ರಭುದೇವರ ವಚನಗ್ರಂಥಗಳ ಮೆರವಣಿಗೆ, 111 ಮಠಾಧೀಶರ ಪಾದಪೂಜೆ, ಮಹಿಳಾ ಸಮಾವೇಶ, ಕಳಸಾರೋಹಣ, ಲೋಕಾರ್ಪಣೆ, ಧರ್ಮಸಭೆ ಹೀಗೆ ನಾನಾ ರೀತಿ ಹಮ್ಮಿಕೊಂಡಿದ್ದ ಎಲ್ಲ ಕಾರ್ಯಕ್ರಮಗಳು ಅಚ್ಚುಕಟ್ಟಾಗಿ ಜರುಗಿದವು. ಅಲ್ಲದೇ ರೊಟ್ಟಿ, ಶೇಂಗಾ ಹೋಳಿ, ಶೇಂಗಾ ಉಂಡಿ, ಕರಗಡಬು ಜಾತ್ರೆಗಳು ರಾಜ್ಯದ ಗಮನ ಸೆಳೆದವು. ಕಾರ್ಯಕ್ರಮ ನಿಮಿತ್ತ ನಿರಂತರವಾಗಿ ಪ್ರತಿದಿನ ನಡೆದ ಅನ್ನಪ್ರಸಾದ ವ್ಯವಸ್ಥೆ 12ನೇ ಶತಮಾನದ ಕಲ್ಯಾಣವನ್ನು ನೆನಪಿಸಿದಂತೆ ಇತ್ತು. ಹೂರ್ಣದ ಹೋಳಿ, ಜಿಲೇಬಿ, ಮಾದೇಲಿ, ಹಾಲುಗ್ಗಿ, ಪಾಯಸಾ, ಬಾಲೂಶಾ, ಶೇಂಗಾ ಹೋಳಿಗೆ, ಉಂಡಿ, ರೊಟ್ಟಿ, ಚಪಾತಿ, ಪಲ್ಲೆ, ಅನ್ನ, ಕಿಚಡಿಯಂತಹ ಅನ್ನಪ್ರಸಾದ ವ್ಯವಸ್ಥೆ ಮರೆಯುವಂತಿಲ್ಲ. ಇನ್ನೂ ಈ ಅಭೂತಪೂರ್ವ ಕಾರ್ಯಕ್ರಮಕ್ಕೆ ತೇರದಾಳ ಸೇರಿದಂತೆ ಸಸಾಲಟ್ಟಿ, ಗೋಲಭಾವಿ, ಕಾಲತಿಪ್ಪಿ, ಹನಗಂಡಿ, ಹಳಿಂಗಳಿ, ತಮದಡ್ಡಿ, ಯರಗಟ್ಟಿ, ಪಾಲಭಾವಿ, ನದಿಇಂಗಳಗಾಂವ ಸೇರಿದಂತೆ ಬೇರೆ ಬೇರೆ ಭಾಗದ ಭಕ್ತರು ನೀಡಿದ ಮಾಡಿದ ಸಹಾಯ ಸಹಕಾರ ಕಾರ್ಯಕ್ರಮದ ಯಶಸ್ವಿಗೆ ಕಾರಣವಾಯಿತು. ಜತೆಗೆ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ, ವೇದಿಕೆ, ಪಾರ್ಕಿಂಗ್, ಪ್ರಸಾದ, ಹಣಕಾಸು, ಪ್ರಚಾರ ಹೀಗೆ ಹಲವಾರು ಸಮಿತಿಗಳು ತಮಗೆ ವಹಿಸಿದ್ದ ಜವಾಬ್ದಾರಿಯನ್ನು ಸರಿಯಾದ ರೀತಿಯಲ್ಲಿ ನಿಭಾಯಿಸಿದ್ದು ಕಾರ್ಯಕ್ರಮದ ಯಶಸ್ವಿಗೆ ಸಹಕಾರವಾಯಿತು. ಜತೆಗೆ ಚಿಕ್ಕಮಕ್ಕಳಿಂದ ಹಿಡಿದು ವೃದ್ಧರ ವರೆಗೆ ತಮಗೆ ಆದಷ್ಟು ಸೇವೆ ಸಲ್ಲಿಸುವ ಮೂಲಕ ಸೈ ಎನಿಸಿಕೊಂಡರು. ಒಟ್ಟಿನಲ್ಲಿ ಅಲ್ಲಮಪ್ರಭುದೇವರ ನೂತನ ಮಂದಿರ ಲೋಕಾರ್ಪಣೆ ಕಾರ್ಯಕ್ರಮ ತೇರದಾಳದ ಕೀರ್ತಿಯನ್ನು ಇಮ್ಮಡಿಗೊಳಿಸಿತು ಎಂದರೆ ತಪ್ಪಾಗಲಾರದು.

## ಜಾಗ ನೀಡಿದವರ ಹೆಸರಲ್ಲಿ ಬಡಾವಣೆ: ಸಮಾಜಕ್ಕೆ ಒಳಿತು ಮಾಡುವ ವ್ಯಕ್ತಿತ್ವ ಅಪರೂಪ



**ತೇರದಾಳ:**ಈಭೂಮಿಮೇಲೆನಾವುಮನುಷ್ಯರಾಗಿ ಜನ್ಮ ತಾಳುವುದೆ ಒಂದು ಸೌಭಾಗ್ಯ. ಅಂತಹ ಸೌಭಾಗ್ಯವನ್ನು ಭಗವಂತನು ಕರುಣಿಸಿದಾಗ ಸಮಾಜದ ಒಳ್ಳೆಯ ಕೆಲಸಗಳಿಗೆ ಬಡವರಿಗೆ ನೆರವು ಆಗುವ ನಿಟ್ಟಿನಲ್ಲಿ ತೊಡಗಿಸಿಕೊಂಡಾಗ ಮಾತ್ರ ವ್ಯಕ್ತಿಯ ವ್ಯಕ್ತಿತ್ವ ಬೆಳೆಯಲು ಸಾಧ್ಯ ಎಂದು ಶೇಗುಣಸಿ ವಿರಕ್ತಮಠದ ಡಾ. ಮಹಾಂತಪ್ರಭು ಹೇಳಿದರು.
ಪಟ್ಟಣದ ದಿ. ಪಾರ್ಶ್ವನಾಥ ನಾಡಗೌಡ ಅವರು ಬಡವರಿಗೆ ಮನೆ ಕಟ್ಟಿಕೊಳ್ಳಲು ನೀಡಿದ್ದ ಅಂದಾಜು ಎರಡು ಎಕರೆ ಜಾಗಕ್ಕೆ ಅವರ ಸ್ಮರಣಾರ್ಥವಾಗಿ ನಿರ್ಮಿಸಿದ ಪಿ.ಎಸ್. ನಾಡಗೌಡ ನಗರ ನಾಮಕರಣ ಫಲಕವನ್ನು ಅನಾರವಣಗೊಳಿಸಿ ಮಾತನಾಡಿದರು.
ಸಮಾಜ ನನಗೆ ಏನು ಮಾಡಿದೆ ಎನ್ನುವ ಬದಲು ಈ ಸಮಾಜಕ್ಕೆ ನನ್ನ ಕೊಡುಗೆ ಏನು ಎಂಬುದರ ಪರಿಕಲ್ಪನೆಯೊಂದಿಗೆ ಬದುಕು ನಡೆಸಿದ ಪಿ.ಎಸ್. ನಾಡಗೌಡ ಅವರ ಸಾಮಾಜಿಕ ಸೇವೆ ನಿಜಕ್ಕೂ ಶ್ಲಾಘನೀಯ ಎಂದು ಬಣ್ಣಿಸಿದರು. ಜಮಖಂಡಿ ಶಾಸಕ ಜಗದೀಶ ಗುಡಗುಂಟಿಮಠ ಮಾತನಾಡಿ, ಸಮಾಜ ಏಳಿಗೆಗೆ ಶ್ರಮಿಸಿದವರನ್ನು ಹಾಗೂ ಕೊಡುಗೆ ನೀಡಿದವರನ್ನು ಸ್ಮರಿಸುವುದು ನಮ್ಮ ನಿಜವಾದ ಕರ್ತವ್ಯ. ಬಡವರ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಪಾರ್ಶ್ವನಾಥ ನಾಡಗೌಡ ಅವರ ಹೆಸರಲ್ಲಿ ಬಡಾವಣೆ ಮಾಡಿದ್ದು ಸಂತಸದ ಸಂಗತಿ ಎಂದು ಹೇಳಿದರು. ಹಳೇ ಹುಬ್ಬಳ್ಳಿ ನೀಲಕಂಠಮಠದ ಶಿವಶಂಕರ ಶಿವಾಚಾರ್ಯ, ಜಯಶ್ರೀ ನಾಡಗೌಡ, ಪುರಸಭೆ ಅಧ್ಯಕ್ಷೆ ಶಿಲ್ಪಾ ರೋಡಕರ, ಉಪಾಧ್ಯಕ್ಷೆ ನಸ್ರೀನ್‌ಬಾನು ನಗಾರ್ಜಿ, ವಿಜಯಮಹಾಂತೇಶ ನಾಡಗೌಡ, ಪ್ರವೀಣ ನಾಡಗೌಡ, ನಾಗಪ್ಪ ಸನದಿ, ದೇವಲ ದೇಸಾಯಿ, ಪರಪ್ಪ ಗೌಡರ, ಶೀತಲ ಗೂಳನ್ನವರ, ಬಸವರಾಜ ಶೇಡಬಾಳ, ಸುರೇಶ ಕಬಾಡಗಿ, ಶೆಟ್ಟೆಪ್ಪ ಸುಣಗಾರ, ರುಸ್ತುಂ ನಿಪ್ಪಾನಿ, ಶಂಕರ ಬೆಳಕೂಡ, ಸುಭಾಸ ಕಂಪನ್ನವರ, ಪರಪ್ಪ ಮೇಗಾಡಿ, ಮಲ್ಲಪ್ಪ ಮಿರ್ಜಿ, ರಾಚಪ್ಪ ನಿಂಗನೂರ ಸೇರಿದಂತೆ ಇನ್ನಿತರಿದ್ದರು.

## ನಾಗರಿಕ ಸೌಲಭ್ಯ ಕಲ್ಪಿಸಲು ಬದ್ಧ: ಶಾಸಕ ಸಿದ್ದು ಸವದಿ



**ರಬಕವಿ-ಬನಹಟ್ಟಿ :** ಸನ್-2024-25ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಅನುದಾನದಲ್ಲಿನ ಪ್ಯಾಕೇಜ್-5ರ ವಾರ್ಡನಂ :6ರಲ್ಲಿ ಸುನೀಲ ಆರಗಿ ಮನೆಯಿಂದ ಭಸ್ಮೆ ಮನೆಯವರೆಗೆ ರು.7.50 ಲಕ್ಷ ವೆಚ್ಚದ ಸಿಸಿ ರಸ್ತೆ, ವಾರ್ಡನಂ;7ರಲ್ಲಿ ಜಿಗಜಿನ್ನಿ ಮನೆಯಿಂದ ಸುಭಾಸ ಮಂಡಿ ಮನೆಯವರೆಗೆ ರು.90ಸಾವಿರ ವೆಚ್ಚದ ಸಿಸಿ ರಸ್ತೆ, ವಾರ್ಡನಂ : 31ರಲ್ಲಿ ಬೆಟಗೇರಿ ಲೇಔಟ್‌ನಲ್ಲಿ ರು.7.48 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಿಸಲು ಭೂಮಿ ಪೂಜಾ ನೆರವೇರಿಸಿದ ಶಾಸಕ ಸಿದ್ದು ಸವದಿ ನಾಗರಿಕ ಸೌಲಭ್ಯಗಳನ್ನು ಕಲ್ಪಿಸಿ ಜನತೆಗೆ ಮೂಲಭೂತ ಸೌಲಭ್ಯ ಕಲ್ಪಿಸಲು ತಾವು ಬದ್ಧರಾಗಿರುವುದಾಗಿ ನುಡಿದರು. ಸರ್ಕಾರದಲ್ಲಿ ಜನತೆಗೆ ಅಭಿವೃದ್ಧಿ ಹೊಂದಲು ಬೇಕಾದ ಕಾಮಗಾರಿ ನಡೆಸಲು ಅವಕಾಶ ಸಿಗುತ್ತಿಲ್ಲವಾದರೂ ಲಭ್ಯ ಸಂಪನ್ಮೂಲ ಬಳಸಿ, ಸರ್ಕಾರದ ಮೇಲೆ ಒತ್ತಡ ಹೇರಿ ಕ್ಷೇತ್ರದ ಪ್ರಗತಿಗೆ ಅಹರ್ನಿಶಿ ಶ್ರಮಿಸುವ ಭರವಸೆ ನೀಡಿದರು.
ಪೂಜಾ ಕಾರ್ಯ ನಡೆಸಿದ ಸಂದರ್ಭದಲ್ಲಿ ನಗರಾಧ್ಯಕ್ಷೆ ವಿದ್ಯಾ ದಬಾಡಿ, ಉಪಾಧ್ಯಕ್ಷೆ ದೀಪಾ ಗಾಡಿವಡ್ಡರ, ಸ್ಥಾಯಿ ಸಮೀತಿ ಚೇರಮನ್ ಅರುಣ ಬುದ್ನಿ, ರೇಕಾ ರವಿ ಕೊರತೆ, ಪೌರಾಯುಕ್ತ ಜಗದೀಶ ಈಟಿ, ಸಂಜಯ ತೆಗ್ಗಿ, ಯಲ್ಲಪ್ಪ ಕಟಗಿ, ವಸಂತ ಪವಾರ, ಮುತ್ತಣ್ಣ ಚೌಡಕಿ, ಸದಾಶಿವ ಉಂಕಿ, ಭೀಮು, ಮಲ್ಲಪ್ಪ ಆರಗಿ, ರುದ್ರಪ್ಪ ಅರಳಿಕಟ್ಟಿ, ಶಂಕ್ರೆಪ್ಪ ಬೈಲಹೊಂಗಲ, ಶ್ರೀಶೈಲ ಮರೇಗುದ್ದಿ ಸೇರಿದಂತೆ ಪ್ರಮುಖರಿದ್ದರು.

## ನಾಲ್ವರು ಶಿಕ್ಷಕರ ವರ್ಗಾವಣೆ ವಿರುದ್ಧ ವಿದ್ಯಾರ್ಥಿಗಳು ಪ್ರತಿಭಟನೆ



**ಬಾಗಲಕೋಟೆ :** ಜಿಲ್ಲೆಯ ಬಾದಾಮಿ ತಾಲೂಕಿನ ಕೆರೂರು ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಾಲ್ವರು ಶಿಕ್ಷಕರನ್ನು ಏಕಾಏಕಿ ವರ್ಗಾವಣೆ ಮಾಡಿರುವುದನ್ನು ಖಂಡಿಸಿ ಬಾಗಲಕೋಟೆ ನಗರದಲ್ಲಿ ಇಂದು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ನವನಗರದ ಜಿಲ್ಲಾಡಳಿತ ಭವನದ ಮುಂದೆ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳು ಪ್ರೊ. ಮಲ್ಲಪ್ಪ ಹೊಸೂರ, ಜಗದೀಶ, ಶಿವಶಂಕರ ಪ್ರಸಾದ, ವಿಶ್ವನಾಥ ಕೋಳೂರ ಅವರನ್ನು ಸರ್ಕಾರ ಮತ್ತು ಕಾಲೇಜು ಶಿಕ್ಷಣ ಇಲಾಖೆ ಏಕಾಏಕಿ ವರ್ಗಾವಣೆ ಮಾಡಿದ್ದು, ಅಂತಿಮ ವರ್ಷದ ಶೈಕ್ಷಣಿಕ ವರ್ಷ ಕೊನೆಗೊಳ್ಳುತ್ತಿರುವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಗೆ ತೊಂದರೆಯಾಗಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ನಾಲ್ವರು ಶಿಕ್ಷಕರನ್ನು ಮರು ವರ್ಗಾವಣೆ ಮಾಡುವಂತೆ ವಿದ್ಯಾರ್ಥಿಗಳು ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

## ರಬಕವಿ: ಗೌರಿ ಹುಣ್ಣಿಮೆ ನಿಮಿತ್ಯ ಮಹಿಳೆಯರಿಗೆ ಸಾಂಸ್ಕೃತಿಕ ಸ್ಪರ್ಧೆಗಳು

**ರಬಕವಿ :** ಇಲ್ಲಿಯ ಶ್ರೀ ದಾನೇಶ್ವರಿ ಮಹಿಳಾ ಮಂಡಳ ಹಾಗೂ ಶ್ರೀ ಶಂಕರಲಿಂಗ ದೇವಸ್ಥಾನ ಟ್ರಸ್ಟ್ ಸಹಯೋಗದಲ್ಲಿ ಗೌರಿ ಹುಣ್ಣಿಮೆ ನಿಮಿತ್ಯ ನವೆಂಬರ 16 ರಂದು ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ದಿ. 15 ರಂದು ಸಂಜೆ 4 ಗಂಟೆಗೆ ಶ್ರೀ ದಾನೇಶ್ವರಿ ದೇಗುಲದಿಂದ ಎಲ್ಲ ಮಹಿಳೆಯರು ಮಂಗಳ ವಾದ್ಯಗಳೊಡನೆ ಸಕ್ಕರೆ ಆರತಿ ಜೊತೆಗೆ ವಾರ್ಕರಿ ನೃತ್ಯ ಪ್ರದರ್ಶನ ಮಾಡುತ್ತ ಶ್ರೀ ಶಂಕರಲಿಂಗ ದೇವಸ್ಥಾನಕ್ಕೆ ತೆರಳಿ ಮಂಗಳಾರತಿ ಮಾಡಿದ ಬಳಿಕ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಲಿದೆ.
ದಿ. 16 ರಂದು ಗೇಮ್ - 1 ಮತ್ತು ಗೇಮ್ - 2 ಎಂಬ ಎರಡು ಪ್ರಕಾರದ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು ,
ದಿ. 17 ರಂದು ಹಾಸ್ಯ ಸಂಜೆ ಹಾಗೂ ಜಾದೂ ಕಾರ್ಯಕ್ರಮ ಶ್ರೀದಾನಮ್ಮದೇವಿ ದೇವಸ್ಥಾನದಲ್ಲಿ ಸಂಜೆ 4 ಗಂಟೆಗೆ ಜರುಗಲಿದೆ.
ದಿ. 18 ರಂದು ಸಂಜೆ 4 ಕ್ಕೆ ನಮ್ಮಮ್ಮ ಸೂಪರ್‌ಸ್ಟಾರ್ ಸ್ಪರ್ಧೆ ಜರುಗಲಿದೆ. ದಿ. 19 ರಂದು ಸಂಜೆ 4 ಕ್ಕೆ ಬಹುಮಾನ ವಿತರಣೆ ಮತ್ತು ವೇದಿಕೆ ಕಾರ್ಯಕ್ರಮ ಜರುಗಲಿದೆಯೆಂದು ಮಹಿಳಾ ಮಂಡಳದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಸ್ಮಶಾನಕ್ಕಾಗಿ ಹೋರಾಟ ಮಾಡುತ್ತಿರುವುದು ನಾಚಿಕೆಗೇಡು ಸಂಗತಿ

### ಸರ್ವೆ ನಂ 64 ರಲ್ಲಿ 1 ಎಕರೆ 39 ಗುಂಟೆ ಜಾಗೆ । ಮುಂದಿನ ದಿನಗಳಲ್ಲಿ ಉಗ್ರ ಹೋರಾಟ । ಹೊಸೂರಿನ 17 ಸಮುದಾಯದವರಿಗೆ ಇರುವುದು ಒಂದೇ ರುದ್ರಭೂಮಿ



**ರಬಕವಿ-ಬನಹಟ್ಟಿ :** ಹೊಸೂರಿನ 17 ಸಮುದಾಯದ ಹಿಂದೂಗಳು ಸ್ಮಶಾನಕ್ಕಾಗಿ ಹೋರಾಟ ಮಾಡುತ್ತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಮುಂದಿನ ದಿನಗಳಲ್ಲಿ, ಉತಾರೆಯಲ್ಲಿ ಕಬ್ರಸ್ತಾನ ಸುನ್ನಿ ವಕ್ಫ್ ಆಸ್ತಿ ಎಂಬುದನ್ನು ತೆಗೆದು ಹಾಕದಿದ್ದರೆ ತಹಶೀಲ್ದಾರ್ ಕಾರ್ಯಾಲಯಕ್ಕೆ ಬೀಗ ಜಡಿದು ಹೋರಾಟ ಮಾಡಲಾಗುವುದು ಎಂದು ಹಳೆ ಹುಬ್ಬಳ್ಳಿಯ ವೀರಭಿಕ್ಷಾವರ್ತಿ ಮಠದ ಜಗದ್ಗುರು ಶಿವಶಂಕರ ಶಿವಾಚಾರ್ಯರು ಎಚ್ಚರಿಕೆ ನೀಡಿದರು.
ಅವರು ಮಂಗಳವಾರ ಹೊಸೂರಿನ ಜನರು ಕೈಗೊಂಡ ಬೃಹತ್ ಪ್ರತಿಭಟನೆಯ ಮೋರ್ಚಾ ಸಂದರ್ಭದಲ್ಲಿ ತಹಶೀಲ್ದಾರ್ ಗಿರೀಶ ಸ್ವಾದಿಯವರಿಗೆ ಮನವಿ ಸಲ್ಲಿಸಿ ಮಾತನಾಡಿದರು.
ಒಂದು ವರ್ಗದ ಜನರಿಗೆ ನಮ್ಮ ದೇಶದ ಅಯೋಧ್ಯಾ, ಕಾಶಿ ಮಂದಿರ, ಸೋಮನಾಥ ದೇವಾಲಯ ಮತ್ತು ದೇಶದ ಯಾವುದೇ ಆಸ್ತಿಗಳು ಸಾಕಾಗುತ್ತಿಲ್ಲ. ಈಗ ಸ್ಮಶಾನಗಳು ಕೂಡ ಸಾಲುತ್ತಿಲ್ಲ. ಮುಂದಿನ ದಿನಗಳಲ್ಲಿ ನಮ್ಮ ಶೌಚಾಲಯಗಳು ಇವರಿಗೆ ಸಾಲುವುದಿಲ್ಲ ಎಂದು ಶಿವಶಂಕರ ಶಿವಾಚಾರ್ಯರು ತಿಳಿಸಿದರು.
ಊರಿನ ಮುಖಂಡ ಹಾಗೂ ನ್ಯಾಯವಾದಿ ವೆಂಕಟೇಶ ನಿಂಗಸಾನಿ ಮಾತನಾಡಿ, ಹೊಸೂರಿನಲ್ಲಿ 17 ಸಮುದಾಯಕ್ಕೆ ಇರುವುದು ಒಂದೇ ರುದ್ರಭೂಮಿ. ದಿನಾಂಕ 03-02-2020 ರಲ್ಲಿ ( ಆಗ ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಇತ್ತು ) ಬಾಗಲಕೋಟೆ ಜಿಲ್ಲಾ ವಕ್ಫ್ ಅಧಿಕಾರಿಯೊಬ್ಬರು ರಬಕವಿ ಬನಹಟ್ಟಿ ತಹಶೀಲ್ದಾರ್ ಇವರಿಗೆ ಯಾವುದೇ ದಾಖಲೆಗಳನ್ನು ಸಲ್ಲಿಸದೆ ಒಂದು ಅರ್ಜಿಯನ್ನು ನೀಡಿ ರಬಕವಿ - ಬನಹಟ್ಟಿ ತಾಲ್ಲೂಕು ಪೈಕಿ ಹೊಸೂರಿನ ಆರ್.ಎಸ್. ನಂಬರ್ 64 ರಲ್ಲಿಯ 1 ಎಕರೆ 39 ಗುಂಟೆ ಆಸ್ತಿಯು ಕಬ್ರಸ್ಥಾನ ಸುನ್ನಿ ವಕ್ಫ್ ಆಸ್ತಿ ಎಂದು ದಾಖಲು ಮಾಡಲು ಅರ್ಜಿ ಸಲ್ಲಿಸಿದ್ದರು.
ಆದರೆ ರಬಕವಿ ಬನಹಟ್ಟಿ ತಹಶೀಲ್ದಾರರು ಇಲ್ಲಿ ಯಾವುದೇ ಸ್ಥಳೀಯವಾಗಿ ಪರಿಶೀಲನೆ, ವಿಚಾರಣೆ ಮಾಡದೆ, ನಗರದ ಯಾವುದೇ ಹಿರಿಯರಿಗೆ ಮತ್ತು ನಗರಸಭೆಯ ಸದಸ್ಯರಿಗೆ ತಿಳಿಸದೆ ಏಕ ಪಕ್ಷೀಯವಾಗಿ ನಿರ್ಧಾರ ತೆಗೆದುಕೊಂಡು ಹೊಸೂರಿನ ಹಿಂದೂ ಧರ್ಮದ ರುದ್ರ ಭೂಮಿಯ ಹೆಸರನ್ನು ಕಡಿಮೆ ಮಾಡಿ ಕಬ್ರಸ್ತಾನ ಸುನ್ನಿ ವಕ್ಫ್ ಆಸ್ತಿ ಎಂದು ಉತಾರೆಯ ಸ್ವಾಧೀನದಾರರ ಕಾಲಂ ನಲ್ಲಿ ದಾಖಲು ಮಾಡಿದ್ದಾರೆ. ಈ ಎಲ್ಲ ಬೆಳವಣಿಗೆಗಳು ಕೋವಿಡ್ ಸಂದರ್ಭದಲ್ಲಿ ನಡೆದಿವೆ. ಈ ಎಲ್ಲ ಪ್ರಕ್ರಿಯೆಗಳನ್ನು ಕಳ್ಳ ಮಾರ್ಗದಿಂದ ಮಾಡಲಾಗಿದೆ ಎಂದು ನಿಂಗಸಾನಿ ಆರೋಪಿಸಿದರು.
ಆದಷ್ಟು ಬೇಗನೆ ವಕ್ಫ್ ಉತಾರೆಯ ಹೆಸರನ್ನು ಕಡಿಮೆ ಮಾಡಿ ಮೂಲ ದಾಖಲಾತಿಯಂತೆ ತಿದ್ದುಪಡೆ ಮಾಡದೆ ಇದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಕೈಗೊಳ್ಳಲಾಗುವುದು ಎಂದು ನೆರೆದ ಊರಿನ ಜನರ ಮುಂದೆ ತಿಳಿಸಿದರು.
ಈ ಸಂದರ್ಭದಲ್ಲಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ವೆಂಕನಗೌಡ ಪಾಟೀಲ, ಆರ್. ಆರ್. ಲೆಂಡಿ, ಅರುಣ ಬುದ್ನಿ, ಸುಭಾಸ ಚೋಳಿ, ಕಾಡಪ್ಪ ತೇಲಿ, ಶ್ರೀಶೈಲ ಕರಡಿ, ಬಸಪ್ಪ ಚಿನಗುಂಡಿ, ಸಂಜು ಮಠದ ಸೇರಿದಂತೆ ನೂರಾರು ಮಹಿಳೆಯರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಹೊಸೂರು ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನದಿಂದ ತಹಶೀಲ್ದಾರ್ ಕಾರ್ಯಾಲಯದವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ನಡೆಸಿ ಸರ್ಕಾರದ ವಿರುದ್ಧ ಧಿ:ಕ್ಕಾರದ ಘೋಷಣೆ ಕೂಗಿದರು. ಸಿಪಿಐ ಸಂಜೀವ ಬಳಿಗಾರ ಮತ್ತು ಪಿಎಸ್‌ಐ ಶಾಂತಾ ಹಳ್ಳಿ ಸೂಕ್ತ ಬಂದೊಬಸ್ತಿಯನ್ನು ಒದಗಿಸಿದ್ದರು.

# ವಿದ್ಯೆ ನೀಡಿದ ಗುರು ಶ್ರೇಷ್ಠ



**ಬನಹಟ್ಟಿ :** ವಿದ್ಯೆಯನ್ನು ನೀಡಿದ ಗುರು ಶ್ರೇಷ್ಠ. ವಿದ್ಯಾರ್ಜನೆ ಮಾಡಿದ ಗುರುಗಳನ್ನು ಗೌರವಿಸುವುದರ ಜೊತೆಗೆ ಅವರನ್ನು ದಿನನಿತ್ಯ ಸ್ಮರಿಸಬೇಕು ಎಂದು ಹಾವೇರಿ ಜಿಲ್ಲೆಯ ನರಸಿಪುರದ ಅಂಬಿಗರ ಚೌಡಯ್ಯ ಮಹಾಪೀಠದ ಜಗದ್ಗುರು ಶಾಂತಭೀಷ್ಮ ಚೌಡಯ್ಯನವರು ತಿಳಿಸಿದರು.
ಅವರು ಭಾನುವಾರ ಇಲ್ಲಿನ ಬಸವೇಶ್ವರ ಸಮುದಾಯ ಭವನದಲ್ಲಿ ಸ್ಥಳಿಯ ಸರ್ಕಾರಿ ಪ್ರೌಢ ಶಾಲೆಯಲ್ಲಿ 2004-05 ರಲ್ಲಿ ಎಸ್. ಎಸ್. ಎಲ್. ಸಿ. ಪೂರೈಸಿದ ವಿದ್ಯಾರ್ಥಿಗಳು ಹಮ್ಮಿಕೊಂಡ ಗುರುವಂದನಾ ಮತ್ತು ಸ್ನೇಹ ಸಂಭ್ರಮ ಕಾರ್ಯಕ್ರಮದಲ್ಲಿ ಮಾತನಾಡಿದರು.
ಸ್ನೇಹಿತರಲ್ಲಿಯ ಸ್ನೇಹವು ಕೂಡಾ ಮಹತ್ವವಾದುದು. ಸ್ನೇಹವು ಸದಾ ಹಸಿರಾಗಿರಲು ನಮ್ಮಲ್ಲಿ ಯಾವುದೇ ಬೇಧಭಾವ ಇರಬಾರದು. ಇಲ್ಲಿ ಎಲ್ಲರೂ ಒಂದೇ ಎಂಬ ಭಾವನೆ ಮೂಡಬೇಕು. ವಿದ್ಯಾರ್ಥಿಗಳು ತಮ್ಮ ತಂದೆ, ತಾಯಿ, ಕಲಿತ ಶಿಕ್ಷಣ ಸಂಸ್ಥೆ ಮತ್ತು ಕಲಿಸಿದ ಗುರುಗಳಿಗೆ ಗೌರವ ತಂದು ಕೊಡುವ ಕಾರ್ಯಗಳನ್ನು ಮಾಡಬೇಕು ಎಂದು ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ತಿಳಿಸಿದರು.
ಬನಹಟ್ಟಿ ಹಿರೇಮಠದ ಶರಣಬಸವ ಶಿವಾಚಾರ್ಯರು ಮಾತನಾಡಿ, ತಂದೆ ಮತ್ತು ತಾಯಿ ಮೊದಲ ಗುರುವಾದರೆ, ವಿದ್ಯೆ ನೀಡಿದ ಶಿಕ್ಷಕ ಎರಡನೆಯ ಗುರು ಮತ್ತು ಧಾರ್ಮಿಕ ಸಂಸ್ಕಾರ ನೀಡಿದ ಗುರುಗಳು ಮೂರನೆಯ ಗುರುಗಳಾಗಿರುತ್ತಾರೆ. ಪ್ರತಿಯೊಬ್ಬರ ಜೀವನದಲ್ಲಿ ಇವರ ಪಾತ್ರ ಬಹಳಷ್ಟು ಮುಖ್ಯವಾಗಿದೆ ಎಂದರು.
ಈ ಸಂದರ್ಭದಲ್ಲಿ ಬಿ. ಎ. ದೇಶಪಾಂಡೆ, ಬಿ. ಎಸ್. ಮಿಳ್ಳಿ, ಮಧುಕೇಶ್ವರ ಬೆಳಗಲಿ, ಆರ್. ಎಸ್. ಚನಾಳ, ಎಲ್. ಬಿ. ಗುಗ್ಗರಿ ಸೇರಿದಂತೆ ಹಲವಾರು ಶಿಕ್ಷಕರನ್ನು ಸನ್ಮಾನಿಸಲಾಯಿತು.
ಮಲ್ಲೇಶ ಬಡಿಗೇರ, ಪ್ರಭು ಮಡ್ಡಿ, ಶ್ರೀಶೈಲ ಮೋಪಗಾರ, ಆನಂದ ಕೊಣ್ಣೂರ,
ನಿತಿನ ರಾಯನ್ನವರ, ನಾಗೇಶ ಅಂಬಿ, ಶ್ರೀದೇವಿ ಕರಲಟ್ಟಿ, ನಜ್ಮಾ ನದಾಫ್, ಕಾವೇರಿ ಪಟ್ಟಣ, ಸುನಿತಾ ಲುಕ್ಕ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಸಾಧನೆ ಗುರ್ತಿಸಿ ಸನ್ಮಾನಿಸುವ ಕಾರ್ಯ ಇತರರಿಗೆ ಪ್ರೇರಣೆ: ಪೂಜಾರಿ



**ಲೋಕಾಪುರ:** ಕನ್ನಡದ ಬೆಳವಣಿಗೆಗೆ ಶ್ರಮಿಸಿದ ಹಿರಿಯರ ಸಾಧನೆ ಗುರ್ತಿಸಿ ಸನ್ಮಾನಿಸುವ ಕಾರ್ಯ ಇತರರಿಗೆ ಪ್ರೇರಣೆಯಾಗಲಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತು ತಾಲೂಕಾಧ್ಯಕ್ಷ ಆನಂದ ಪೂಜಾರಿ ಹೇಳಿದರು.

ಪಟ್ಟಣದ ವಿದ್ಯಾಚೇತನ ಶಾಲೆ ಆವರಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಮತ್ತು ವಲಯ ಘಟಕ ಹಾಗೂ ಕರ್ನಾಟಕ ಜಾನಪದ ಪರಿಷತ್ತು ತಾಲೂಕು ಮತ್ತು ವಲಯ ಘಟಕ ಸಹಯೋಗದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಿದ್ದಪ್ಪ ಕುರಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಮುಧೋಳ ತಾಲೂಕಾ ಘಟಕದ ನೂತನ ಅಧ್ಯಕ್ಷ ಪ್ರಕಾಶ ಹೊಸಮನಿ ಹಾಗೂ ನೂತನ ಸದಸ್ಯರಾದ ಎಸ್.ಬಿ. ಅನಂತಪೂರ, ಮಲ್ಲಿಕಾರ್ಜುನ ತಲ್ಲೂರ, ಮಹೇಶ ದಿವಾನ್ ಅವರನ್ನು ಸನ್ಮಾನ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದರು ಅವರು ಪ್ರತಿಯೊಬ್ಬರು ಕನ್ನಡ ಭಾಷಾಭಿಮಾನ ಬೆಳೆಸಿಕೊಳ್ಳಬೇಕು. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕರ್ನಾಟಕ ಜಾನಪದ ಪರಿಷತ್ತು ವತಿಯಿಂದ ಸನ್ಮಾನಿಸುವ ಕಾರ್ಯ ಮಾಡುತ್ತ ಬಂದಿದೆ ಎಂದು ತಿಳಿಸಿದರು.

ಕರ್ನಾಟಕರಾಜ್ಯಸರ್ಕಾರಿನೌಕರರ ಸಂಘ ಮುಧೋಳ ತಾಲೂಕಾ ಘಟಕದ ನೂತನ ಅಧ್ಯಕ್ಷ ಪ್ರಕಾಶ ಹೊಸಮನಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ನನ್ನ ಮೇಲೆ ಇಟ್ಟಿರುವ ಪ್ರೀತಿ ವಿಶ್ವಾಸಕ್ಕೆ ತಮ್ಮರಿಲ್ಲಗೂ ಆಭಾರಿಯಾಗಿದ್ದೇನೆ. ನನ್ನನ್ನು ನೂತನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಕ್ಕಾಗಿ ನನ್ನ ಮೇಲೆ ಹೆಚ್ಚಿನ ಕರ್ತವ್ಯದ ಜವಾಬ್ದಾರಿ ಹೆಚ್ಚಿಸಿದ್ದಿರಿ, ತಾಲೂಕಿನಲ್ಲಿ ಎಲ್ಲ ಸರ್ಕಾರಿ ನೌಕರರ ಹಾಗೂ ಶಿಕ್ಷಕರ ಪ್ರತಿಯೊಂದು ಸಮಸ್ಯೆಗೆ ಸ್ಪಂದಿಸಿ ಪ್ರಾಮಾಣಿಕತೆಯಿಂದ ಕೆಲಸ ಕಾರ್ಯಗಳನ್ನು ಮಾಡುತ್ತೇನೆ ಎಂದು ಹೇಳಿದರು.

ನೂತನಪದಾಧಿಕಾರಿಗಳಿಗೆಸನ್ಮಾನ: ಈ ಸಂದರ್ಭದಲ್ಲಿ ವಿದ್ಯಾಚೇತನ ಶಿಕ್ಷಣ ಸಂಸ್ಥೆ ವತಿಯಿಂದ ಕರ್ನಾಟಕರಾಜ್ಯಸರ್ಕಾರಿನೌಕರರ ಸಂಘ ಮುಧೋಳ ತಾಲೂಕಾ ಘಟಕದ ನೂತನ ಅಧ್ಯಕ್ಷ-ರಿಗೆ ಹಾಗೂ ಪದಾಧಿಕಾರಿಗಳಿಗೆ ಸನ್ಮಾನಿಸಲಾಯಿತು.

ಈ ವೇಳೆ ಕಸಾಪ ವಲಯ ಘಟಕ ಅಧ್ಯಕ್ಷ ಎಸ್.ಎಂ. ರಾಮದುರ್ಗ, ಕಜಾಪ ವಲಯ ಘಟಕ ಅಧ್ಯಕ್ಷ ಪ್ರಭು ಹೊನವಾಡ, ಕಸಾಪ ವಲಯ ಘಟಕ ಕಾರ್ಯದರ್ಶಿ ಪ್ರವೀಣ ಗಂಗಣ್ಣವರ, ಕಜಾಪ ಗೌರವ ಅದ್ಯಕ್ಷೆ ವಿಜಯಲಕ್ಷ್ಮೀ ಕುಂದರಗಿ, ಸಿದ್ದು ಹೂಗಾರ, ರವಿ ಕೊಲ್ಹಾರ, ಅಲ್ಲಾಭಕ್ಷ ಬಾಗವಾನ, ಪಿ.ಬಿ. ಹಿರೇಮಠ, ಎಸ್. ಎಸ್. ವಿರಕ್ತಮಠ, ಸಂಗಮೇಶ ಶಿರಗುಂಪಿ, ಸುಜಾತಾ ಜೋಶಿ, ಭಾಗ್ಯಾಶ್ರೀ ಪಾಟೀಲ, ಸುನಂದಾ ವಜ್ಜರಮಟ್ಟಿ, ವಿವೇಕ ಮರಾಠಿ, ಚಿದಾನಂದ ಮುಂಡಾಸದ, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕರ್ನಾಟಕ ಜಾನಪದ ಪರಿಷತ್ತು ಪದಾಧಿಕಾರಿಗಳು, ಶಿಕ್ಷಕವೃಂದ, ಮಕ್ಕಳು ಇದ್ದರು.

# ರಾಜಶೇಖರ ಕುಕ್ಕುಂದಾ ಅವರಿಗೆ ಮಕ್ಕಳ ಸಾಹಿತ್ಯ ರಾಜ್ಯ ಪ್ರಶಸ್ತಿ ಗೌರವ

## ಮಕ್ಕಳಲ್ಲಿ ಪುಸ್ತಕ ಪ್ರೀತಿ ಬೆಳೆಸಿ: ಸವಿತಾ ನಾಗಭೂಷಣ ಕರೆ

**ಬಾಗಲಕೋಟೆ :** ನಗರದ ಬಿ.ವಿ.ವಿ.ಸಂಘದ ಬಸವೇಶ್ವರ ಇಂಜಿನಿಯ-ರಿಂಗ್ ಕಾಲೇಜಿನ ಪ್ರಾಧ್ಯಾಪಕ ಮತ್ತು ಮಕ್ಕಳ ಸಾಹಿತಿ ರಾಜಶೇಖರ ಕುಕ್ಕುಂದಾ ಅವರ 'ಬಿಸಿಬಿಸಿ ಬಾತು' (ಮಕ್ಕಳ ಪದ್ಯಗಳು) ಕೃತಿ 2024 ನೇ ಸಾಲಿನ 'ಜಿ.ಬಿ ಹೊಂಬಳ ಮಕ್ಕಳ ಸಾಹಿತ್ಯ ರಾಜ್ಯ ಪ್ರಶಸ್ತಿ'ಯ ಗೌರವಕ್ಕೆ ಭಾಜನವಾಗಿದೆ. ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕ್ರಿಯಾಶೀಲ ಲೇಖಕರಿಗೆ ಪ್ರತಿವರ್ಷ ಈ ಪ್ರಶಸ್ತಿಯನ್ನು ಕೊಡಲಾಗುವುದು. ಧಾರವಾಡದ ನಿವೃತ್ತ ಜಿಲ್ಲಾ ಗ್ರಂಥಾಲಯ ಅಧಿಕಾರಿ ಜಿ.ಬಿ.ಹೊಂಬಳ ಅವರು ಮಕ್ಕಳ ಸಾಹಿತ್ಯಕ್ಕೆ ಉತ್ತೇಜನ ನೀಡಲು ಈ ರಾಜ್ಯಮಟ್ಟದ ಪ್ರಶಸ್ತಿಯನ್ನು ಕೊಡಮಾಡುತ್ತಿರುವರು.

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಸಭಾಭವನದಲ್ಲಿ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಹಿರಿಯ ಕವಿಯಿತ್ರಿ ಸವಿತಾ ನಾಗಭೂಷಣ ಆಗಮಿಸಿದ್ದರು. ಅವರು ತಮ್ಮ ಅತಿಥಿ ಭಾಷಣದಲ್ಲಿ 'ಬದಲಾಗುತ್ತಿರುವ ಇಂದಿನ ಮಕ್ಕಳ ಜೀವನಶೈಲಿ ಅವರನ್ನು ಪುಸ್ತಕಗಳ ಓದಿನಿಂದ ದೂರವಾಗಿಸಿದೆ. ತಂತ್ರಜ್ಞಾನದ ಬಳಕೆಯಲ್ಲಿ ಮಕ್ಕಳು ಕಳೆದು ಹೋಗುತ್ತಿರುವರು. ಮಕ್ಕಳಲ್ಲಿ ಓದಿನ ಹವ್ಯಾಸ ಬೆಳೆಸಲು ಪಾಲಕರು ಪುಸ್ತಕ ಪ್ರೀತಿಯನ್ನು ಬೆಳೆಸಿಕೊಳ್ಳುವುದು ಅಗತ್ಯವಾಗಿದೆ. ರಾಜಶೇಖರ ಕುಕ್ಕುಂದಾ ಅವರ ಪದ್ಯಗಳಲ್ಲಿ ಜೀವನಪ್ರೀತಿ ಮತ್ತು ಸಂದೇಶವಿದೆ. ಇಂತಹ ಪುಸ್ತಕಗಳನ್ನು ಮಕ್ಕಳ ಕೈಗೆ ಕೊಡಿ' ಎಂದು ಹೇಳಿದರು.

ಕ.ವಿ.ವ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಅವರು ಮಾತನಾಡಿ 'ಮಕ್ಕಳ ಸಾಹಿತ್ಯವನ್ನು ಜನಪ್ರಿಯಗೊಳಿಸುವತ್ತ ಆದ್ಯತೆ ನೀಡಬೇಕು. ಪ್ರಕಟಿತ ಪುಸ್ತಕಗಳು ಮಕ್ಕಳ ಕೈಗೆ ಓದಲು ಸಿಗುವಂತಾಗಬೇಕು. ಪುಸ್ತಕಗಳ ಓದಿನಿಂದ ದೂರಾಗುತ್ತಿರುವ ಮಕ್ಕಳ ಮನಸ್ಥಿತಿ ಭವಿಷ್ಯದ ಬಗ್ಗೆ ಆತಂಕ ಮೂಡಿಸುತ್ತಿದೆ' ಎಂದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಲೇಖಕ ರಾಜಶೇಖರ ಕುಕ್ಕುಂದಾ ಅವರು 'ಪ್ರತಿವರ್ಷ ತಮ್ಮ ಜನ್ಮದಿನದಂದು ಒಂದು ಪುಸ್ತಕ ಪ್ರಕಟಿಸಿ ಪ್ರಶಸ್ತಿ ನೀಡುವ ವಿಶಿಷ್ಠ ಸಂಪ್ರದಾಯವನ್ನು ಹುಟ್ಟು ಹಾಕಿದ ನಿವೃತ್ತ ಗ್ರಂಥಪಾಲಕರಾದ ಜಿ.ಬಿ.ಹೊಂಬಳ ಅವರ ಕಾರ್ಯ ಶ್ಲಾಘನೀಯ' ಎಂದರು. ಅವರು ತಮ್ಮ



ಕೃತಿಯಲ್ಲಿನ ಕೆಲವು ಪದ್ಯಗಳನ್ನು ವಾಚಿಸಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಇತರ ಗಣ್ಯರೊಂದಿಗೆ ನಿವೃತ್ತ ಗ್ರಂಥಾಲಯ ಅಧಿಕಾರಿ ಜಿ.ಬಿ.ಹೊಂಬಳ ಉಪಸ್ಥಿತರಿದ್ದರು. ಪ್ರಶಸ್ತಿಯು 15 ಸಾವಿರ ರೂಪಾಯಿಗಳು, ಪ್ರಶಸ್ತಿ ಪತ್ರ ಮತ್ತು ಸ್ಮರಣ ಫಲಕವನ್ನು ಒಳಗೊಂಡಿದೆ.

ಡಾ.ಆನಂದ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಸಮಾರಂಭದಲ್ಲಿ ಸಾಹಿತಿಗಳಾದ ಡಾ.ಮಾಲತಿ ಪಟ್ಟಣಶೆಟ್ಟಿ, ಶ್ಯಾಮಸುಂದರ ಬಿದರಕುಂದಿ, ಡಾ.ಸಿ.ಯು.ಬೆಳ್ಳಕ್ಕಿ, ಡಾ.ಬಸು ಬೇವಿನಗಿಡದ, ರಾಜಕುಮಾರ ಕುಲಕರ್ಣಿ, ಅನಿಲ ಗುನ್ನಾಪೂರ, ಪ್ರಕಾಶ ಕಡಮೆ, ನಿರ್ಮಲಾ ಶೆಟ್ಟರ, ಶ್ರೀಧರ ಗಸ್ತಿ ಮತ್ತು ಸಾಹಿತ್ಯಾಸಕ್ತರು ಉಪಸ್ಥಿತರಿದ್ದರು.

ಪ್ರಶಸ್ತಿಪುರಸ್ಕೃತರಾದರಾಜಶೇಖರಕುಕ್ಕುಂದಾಅವರನ್ನುಬಿ.ವಿ.ವಿಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಸಿ.ಚರಂತಿಮಠ, ಗೌರವ ಕಾರ್ಯದರ್ಶಿ ಮಹೇಶ ಅಥಣಿ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಮ್.ಸಜ್ಜನ (ಬೇವೂರ) ಮತ್ತು ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯ ಡಾ.ಬಿ.ಆರ್.ಹಿರೇಮಠ ಅಭಿನಂದಿಸಿರುವರು.

# ಬೀಡಾಡಿ ದನಗಳ ವಾಸಸ್ಥಾನವಾದ ರಸ್ತೆ: ಸಾರ್ವಜನಿಕರ ಪರದಾಟ

**ಲೋಕಾಪುರ :** ರಾಜ್ಯ ಹೆದ್ದಾ-ರಿಗೆ ಹೊಂದಿಕೊಂಡಿರುವ ಪಟ್ಟಣದ ರಸ್ತೆಗಳು ಈಗ ಬಿಡಾಡಿ ದನಗಳ ವಾಸ ಸ್ಥಾನವಾಗುತ್ತಿವೆ. ರಸ್ತೆಯಲ್ಲೇ ದನಗಳು ಬೀಡು ಬಿಡುತ್ತಿರುವುದರಿಂದ ಸಂಚಾರಕ್ಕೆ ದೊಡ್ಡ ಅಡಚಣೆಯಾಗುತ್ತಿದೆ. ಬೈಕ್ ಸವಾರರು, ಶಾಲಾ ಕಾಲೇಜ್ ವಿದ್ಯಾರ್ಥಿಗಳು, ಪಾದಚಾರಿಗಳು ದನಗಳ ಕಾಟಕ್ಕೆ ಬೇಸತ್ತು ಹೋಗಿದ್ದು, ಸಂಚರಿಸಲು ಪರದಾಡುವಂತಾಗಿದೆ.

ಪಟ್ಟಣದ ಬಸವೇಶ್ವರ ಸರ್ಕಲ್, ಮುಧೋಳ ರಸ್ತೆ, ತರಕಾರಿ ಮಾರುಕಟ್ಟೆ, ಪ್ರಮುಖ ರಸ್ತೆಗಳ ಬಳಿ ಬಿಡಾಡಿ ದನಗಳು ಠಿಕಾಣಿ ಹೂಡುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಬಸವೇಶ್ವರ ಸರ್ಕಲ್ ಬಳಿ ಪೊಲೀಸ್ ಸಿಬ್ಬಂದಿ ದನಗಳನ್ನು ಹೊಡೆಯುವ ಕೆಲಸ ಮಾಡುವಂತಾಗಿದೆ. ಸಂಚಾರ ಸುಗಮಗೊಳಿಸಲು ಪರದಾಡುವಂತಾಗಿದೆ. ಪಟ್ಟಣ ಪಂಚಾಯತಿಯವರು ಸಂಬಂಧಿಸಿದವರಿಗೆ ನೋಟಿಸ್ ಜಾರಿ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ.



ಆದರೆ, ದನಗಳ ಕಾಟ ಮಾತ್ರ ಇನ್ನೂ ತಪ್ಪಿಲ್ಲ. ಖರೀದಿಸಿದ ತರಕಾರಿ, ಸಂತೆಯನ್ನು ತೆಗೆದುಕೊಂಡು ಮನೆಗೆ ತೆರಳಲು ಭಯಪಡುವಂತಾಗಿದ್ದು, ಓಡಾಟಕ್ಕೂ ಅವಕಾಶವಿಲ್ಲ ದಂತಾಗಿದೆ. ರಸ್ತೆಯ ಮೇಲೆ ದಿನಗಳ ಕಾಟ ತಪ್ಪಿಸಿ ಜನಸಾಮಾನ್ಯರು ಮುಕ್ತವಾಗಿ ಸಂಚರಿಸಲು ಅನುಕೂಲ ಮಾಡಿಕೊಡಬೇಕೆಂದು ನಾಗರಿಕರು ಒತ್ತಾಯಿಸಿದ್ದಾರೆ.

**ದನಗಳನ್ನು ರಸ್ತೆಗೆ ಬಿಡದಂತೆ ಈಗಾಗಲೇ ಸಂಬಂಧಿಸಿದವರನ್ನು ಎಚ್ಚರಿಕೆ ನೀಡಿದ್ದೇವೆ. ಮಾಹಿತಿ ಕೊಟ್ಟಿದ್ದೇವೆ. ಧ್ವನಿವರ್ಧಕ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದ್ದೇವೆ. ಬಿಡಾಡಿ ಹಾಗೂ ಮಾಲ್ಕಿ ದನಗಳನ್ನು ರಸ್ತೆಗೆ ಬಿಡಬಾರದು. ತಮ್ಮ ಜಾಗೆಯಲ್ಲಿ ಕಟ್ಟಿಹಾಕಬೇಕು ಎಂದು ಹೇಳಿದರು.**



**– ಜ್ಯೋತಿ ಉಪ್ಪಾರ**
**ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ ಲೋಕಾಪೂರ.**

# ಸಂವಹನ ಕೌಶಲ್ಯದಿಂದ ವ್ಯಕ್ತಿತ್ವ ನಿರ್ಮಾಣ: ಹೋಲಿಮಠ

**ಬಾಗಲಕೋಟೆ :** ಹುಟ್ಟಿದ ಮಗುವಿಗೆ ನೀಡುವ ಸಂಸ್ಕಾರವೇ ವ್ಯಕ್ತಿತ್ವವಾಗಿದ್ದು ಸಂವಹನ ಕೌಶಲ್ಯ ಮತ್ತು ಆನುವಂಶಿಯತೆಯೂ ಕೂಡ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುತ್ತವೆ ಎಂದು ಕಲಾದಗಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರಾದ ಡಾ. ಮಹಾಂತೇಶ ಹೋಲಿಮಠ ಹೇಳಿದರು.



ನಗರದ ಬಿವಿವಿ ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯದ ಐಕ್ಯೂಎಸಿ ಘಟಕ, ಸಮಾಜಶಾಸ್ತ್ರ ವಿಭಾಗದ ವತಿಯಿಂದ ಸೋಮವಾರ ಹಮ್ಮಿಕೊಂಡ ವ್ಯಕ್ತಿತ್ವ ಅಭಿವೃದ್ಧಿ ಮತ್ತು ಸಂವಹನ ವಿಷಯದ ಸರ್ಟಿಫಿಕೇಟ್ ಕೋರ್ಸ್ ಕಾರ್ಯಕ್ರಮವನ್ನು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು. ಕೊರತೆಯ ಮಧ್ಯೆಯು ನಮ್ಮ ತನವನ್ನು ಮೆರೆಯುವುದೇ ವ್ಯಕ್ತಿತ್ವ. ನಮ್ಮ ಸಾಮರ್ಥ್ಯದ ಬಗ್ಗೆ ನಮಗೆ ಅರಿವಿರಬೇಕು. ಒಂದೇ ವಿಷಯದಿಂದ ವ್ಯಕ್ತಿತ್ವ ರೂಪಗೊಳ್ಳುವುದಿಲ್ಲ. ಸಾಮಾಜಿಕ, ಮಾನಸಿಕ, ಬೌದ್ಧಿಕ ಅಂಶಗಳನ್ನು ಬೆಳೆಸಿಕೊಳ್ಳುವುದು ಅವಶ್ಯಕ ಎಂದರು.

ಸಂವಹನ ಕೌಶಲ್ಯದಲ್ಲಿ ಪ್ರಾವಿಣ್ಯತೆ ಬೆಳೆಸಿಕೊಳ್ಳಬೇಕು. ಕ್ರಿಯೆ ಮತ್ತು ಪ್ರತಿಕ್ರಿಯೆ ಸಂವಹನಕ್ಕೆ ಅವಶ್ಯ. ಯಾರೊಂದಿಗೆ ಹೇಗೆ ವರ್ತಿಸಬೇಕು ಅನ್ನೋದು ಮುಖ್ಯ. ಅವಕಾಶಗಳನ್ನು ಹೇಗೆ ಸದ್ಬಳಕೆ ಮಾಡಿಕೊಳ್ಳಬೇಕು ಎನ್ನುವುದನ್ನು ಅರಿತುಕೊಳ್ಳಿ ಭವಿಷ್ಯದ ಜೀವನವನ್ನು ಬಂಗಾರವಾಗಿಸಲು ವಿದ್ಯಾರ್ಥಿಗಜೀವನ ಉತ್ತಮ ವೇದಿಕೆ ಎಂದರು.

ಕಾರ್ಯಕ್ರಮದ ಅಧ್ಯಕ್ಷ ಸ್ಥಾನ ವಹಿಸಿದ ಮಹಾವಿದ್ಯಾಲಯದ ಪ್ರಾಚಾರ್ಯರಾದ ಎಸ್. ಆರ್. ಮೂಗನೂರಮಠ ಅವರು ಮಾತನಾಡಿ ವಿದ್ಯಾರ್ಥಿಗಳು ಮಾತನಾಡುವುದನ್ನು ಮತ್ತು ಭಾವನೆಗಳನ್ನು ವ್ಯಕ್ತಪಡಿಸುವ ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು. ಮಾತು ಮೆದುಳಿನಿಂದ ಬರಬೇಕು, ಮಾತಿನ ರೀತಿ ಸಂದರ್ಭಕ್ಕೆ ತಕ್ಕಂತೆ ಇರಬೇಕು. ಮತ್ತೊಬ್ಬರೊಂದಿಗೆ ಮಾತನಾಡುವಾಗ ಪ್ರಜ್ಞೆ ಇರಲಿ. ದೌರ್ಬಲ್ಯಗಳನ್ನು ಮೆಟ್ಟಿ ಉದ್ಯೋಗದ ಮಾರುಕಟ್ಟೆಗೆ ನಮ್ಮನ್ನು ನಾವು ರೂಪಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಎಂ. ಪಿ. ಬಡಿಗೇರ ಪ್ರಾಸ್ತವಿಕವಾಗಿ ಮಾತನಾಡಿದರು. ಐಕ್ಯೂಎಸ್‌ಸಿ ಸಂಂ-ಯೋಜಕರಾದ ಡಾ. ಎ.ಯೂ ರಾಠೋಡ್, ಜ್ಯೋತಿ ದಿವಟೆ ಸೇರಿದಂತೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಭಗವದ್ಗೀತೆ ಅಭಿಯಾನ ಒಂದು ಪವಿತ್ರ ಕಾರ್ಯ

**ಬೆಳಗಾವಿ:** ಶಿರಸಿಯ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ ಕಳೆದ 18 ವರ್ಷಗಳಿಂದ ನಡೆಸುತ್ತಿರುವ ಭಗವದ್ಗೀತೆ ಅಭಿಯಾನ ಒಂದು ಪವಿತ್ರ ಕಾರ್ಯವಾಗಿದ್ದು, ಇದ-ರಿಂದ ಭಾರತಕ್ಕೆ ಅಂತ್ಯ ಇಲ್ಲ ಎನ್ನುವುದು ಖಾತ್ರಿಯಾಗಿದೆ ಎಂದು ರಾಮಕೃಷ್ಣ ಮಿಶನ್ ಆಶ್ರಮದ ಸ್ವಾಮೀಜಿ ಶ್ರೀ ಮೋಕ್ಷಾತ್ಮಾನಂದ ಮಹಾರಾಜ ಅಭಿಪ್ರಾಯಪಟ್ಟಿದ್ದಾರೆ.

ಭಗವದ್ಗೀತೆ ಅಭಿಯಾನದ ಬೆಳಗಾವಿ ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ಗುರುವಾರ ಇಲ್ಲಿಯ ಸಂತ ಮೀರಾ ಶಾಲೆಯ ಮಾಧವ ಶಾನಭಾಗ ಸಭಾಭವನದಲ್ಲಿ ಉದ್ಘಾಟಿಸಿ ಅವರು ಆಶೀರ್ವಚನ ನೀಡುತ್ತಿದ್ದರು.

ಭಗವಂತನ ಮೂರು ಸೃಷ್ಟಿಗಳಲ್ಲಿ ಭಗವದ್ಗೀತೆಯೂ ಒಂದು. ಪ್ರಪಂಚ, ಮನುಷ್ಯ ಮತ್ತು ಭಗವದ್ಗೀತೆ ಇವು ಅದ್ಭುತ ಸೃಷ್ಟಿಗಳು. ಭಗವಂತ ಇರುವುದಕ್ಕೆ ಈ ಪ್ರಪಂಚವೇ ಸಾಕ್ಷಿ ಎಂದು ಅವರು ಹೇಳಿದರು.

ಮೊಬೈಲ್ ಇಂದು ಮನುಷ್ಯನನ್ನು ನಾಶ ಮಾಡುತ್ತಿದೆ. ಅಮೇರಿಕಾದಲ್ಲಿ ಗ್ಯಾಂಬ್ಲಿಂಗ್ ತತ್ವದ ಮೇಲೆ ಮೊಬೈಲ್ ಕಂಡು ಹಿಡಿಲಾಗಿದೆ. ಒಮ್ಮೆ ಬಳಸಲು ಆರಂಭಿಸಿದರೆ ಹೊರಬರುವುದೇ ಕಷ್ಟವಾಗಿದೆ. ಹಾಗಾಗಿ ಸಾಧ್ಯವಾದಷ್ಟು ಅದ-



ರಿಂದ ದೂರವಿರಬೇಕು. ಮಕ್ಕಳು ಪದವಿ ಮುಗಿಯುವವರೆಗೆ ಮನರಂಜನೆಗಾಗಿ ಮೊಬೈಲ್ ಬಳಸುವುದನ್ನು ನಿಲ್ಲಿಸಬೇಕು. ನಿತ್ಯ ಧ್ಯಾ ನ ಮಾಡುವ ಮೂಲಕ ಮಕ್ಕಳು ತಮ್ಮ ಸರ್ವತೋಮುಖ ಬೆಳವಣಿಗೆ ಮಾಡಿಕೊಳ್ಳಬೇಕು ಎಂದು ಸ್ವಾಮೀಜಿ ಕಿವಿ ಮಾತು ಹೇಳಿದರು.

ಹಿರಿಯ ಸಾಹಿತಿ ಡಾ.ಬಸವರಾಜ ಜಗ-ಜಂಪಿ ಮಾತನಾಡಿ, ಭಗವದ್ಗೀತೆ ಒಂದು ಅಪೂರ್ವ ಗ್ರಂಥ. ನಮ್ಮ ತಂದೆ- ತಾಯಿ ಮಾಡಿಟ್ಟಿರುವ ಆಸ್ತಿಗಳು ಚರ ಆಸ್ತಿಗಳಾದರೆ ಭಗವದ್ಗೀತೆ ಮತ್ತು ಭಗವದ್ಗಾತೆ ಅಭಿಯಾನ ನಮ್ಮ ಮಕ್ಕಳಿಗಾಗಿ ಮಾಡುತ್ತಿರುವ ಸ್ಥಿರ ಆಸ್ತಿ, ಇದು ಎಂದೆಂದೂ ನಾಶವಾಗದು ಎಂದು ಬಣ್ಣಿಸಿದರು.

ರಾಮಾಯಣ, ಮಹಾಭಾರತ ಮತ್ತು ಭಗವದ್ಗೀತೆ ಪವಿತ್ರ ಗ್ರಂಥ, ಎಲ್ಲರನ್ನೂ ಮುನ್ನಡೆಸುವ ಶಕ್ತಿ ಅದಕ್ಕಿದೆ. ಅತ್ಯಂತ ಉದಾತ್ತ ವಿಚಾರಗಳು ಅದರಲ್ಲಿವೆ. ದುಃಖದಲ್ಲಿದ್ದವರಿಗೆ ಸಾಂತ್ವನ ಹೇಳುವ, ಕಷ್ಟದಲ್ಲಿದ್ದವರಿಗೆ ಶಕ್ತಿ ತುಂಬುವ ಸಾಮರ್ಥ್ಯ ಭಗವದ್ಗೀತೆಗಿದೆ. ಎಲ್ಲರಿಗೂ ಮಾರ್ಗದರ್ಶನ ನೀಡುವ ಮೌಲ್ಯಗಳ ಖಜಾನೆ ಅದು ಎಂದು ಅವರು ಹೇಳಿದರು.

ಇಂದು ಮೊಬೈಲ್ ನಮ್ಮನ್ನು ಆವರಿಸಿದೆ. ಅದರಿಂದ ನಮ್ಮ ವ್ಯಕ್ತಿತ್ವ ಕುಬ್ಜವಾಗುತ್ತಿದೆ. ಸಕಾರಾತ್ಮಕ ಚಿಂತನೆ ಮೂಲಕ, ಇರುವ ಭಾಗ್ಯವನ್ನು ನೆನೆದು ವ್ಯಕ್ತಿಗಳನ್ನು ರೂಪಿಸುವ ಮೂಲಕ ರಾಷ್ಟ್ರ ಕಟ್ಟಬೇಕಿದೆ. ಅದ್ಭುತ ಚಿಂತನೆ ಮೂಲಕ ನಡೆಯುವ ಇಂತಹ ಅಭಿಯಾನದಿಂದ ಅದು ಸಾಧ್ಯವಿದೆ. ಎಲ್ಲ ಆಯಾಮಗಳಿಂದ ಒಳ್ಳೆಯ ವಿಚಾರಗಳು ಬರಲಿ, ಪ್ರಯತ್ನ ಮಾಡು, ಫಲಬಯಸಬೇಡ ಎನ್ನುವ ಸಂದೇಶಗಳನ್ನು ಭಗವದ್ಗೀತೆಯಲ್ಲಿ ನೀಡಲಾಗಿದೆ. ಜಯ ಅಪಜಯ, ಲಾಭ ನಷ್ಟ ಎಲ್ಲವನ್ನೂ ಮೀರಿ ಕೆಲಸ ಮಾಡಬೇಕು ಎಂದು ಜಗಜಂಪಿ ಸಲಹೆ ನೀಡಿದರು.

ಖ್ಯಾತ ಉದ್ಯಮಿ ಗೋಪಾಲ ಜಿನಗೌಡ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಭಗವದ್ಗೀತೆ ಅಭಿಯಾನ ಸಮಿತಿಯ ಕಾರ್ಯಾಧ್ಯಕ್ಷ ಪರಮೇಶ್ವರ ಹೆಗಡೆ ಸ್ವಾಗತಿಸಿದರು, ಸಂಚಾಲಕ ಸುಬ್ರಹ್ಮಣ್ಯ ಭಟ್ ನಿರೂಪಿಸಿದರು. ಕಾರ್ಯದರ್ಶಿ ಎಂ.ಕೆ.ಹೆಗಡೆ ವಂದಿಸಿದರು. ಆರಂಭದಲ್ಲಿ ವಿದ್ಯಾರ್ಥಿಗಳಿಂದ ಸರಸ್ವತಿ ವಂದನಾ, ಮಾತೆಯರಿಂದ ಧ್ಯಾನ ಶ್ಲೋಕ ಮತ್ತು ಭಗವದ್ಗೀತೆಯ 9ನೇ ಅಧ್ಯಾಯದ ಪಠಣ ನಡೆಯಿತು.

# ಚಿಂದಿ ಆಯುವ ಮಕ್ಕಳೊಂದಿಗೆ ಮಕ್ಕಳ ದಿನಾಚರಣೆ ಆಚರಿಸಿದ ರೇಣುಕಾ

**ರಾಯಚೂರು :** ಪಂಡಿತ್ ಜವರಲಾಲ್ ನೆಹರು ಅವರ ಹುಟ್ಟುಹಬ್ಬವನ್ನು ಮಕ್ಕಳ ದಿನಾಚರಣೆ ಎಂದು ಆಚರಿಸುವ ದಿನದಂದು ಎಷ್ಟೋ ಜನ ಅದ್ದೂರಿಯಾಗಿ ವಿಶೇಷವಾಗಿ ಮಕ್ಕಳೊಂದಿಗೆ ಮಕ್ಕಳ ದಿನಾಚರಣೆ ಆಚರಣೆ ಮಾಡುತ್ತಾರೆ ಆದರೆ ಮಾನವೀಯತೆ ಮನಕುಲುಕುವ ಕಾರ್ಯವನ್ನು ಸಿರವಾರದ ಕಾಂಗ್ರೆಸ್ ಪಕ್ಷದ ತಾಲೂಕ ಮಹಿಳಾ ಅಧ್ಯಕ್ಷರಾದ ರೇಣುಕಾ ಎನ್ ಅರ್ಥಗರ್ಭಿತವಾಗಿ ಮಕ್ಕಳ ದಿನಾಚರಣೆ ಹಮ್ಮಿಕೊಂಡಿದ್ದರು. ರಾಯಚೂರು ನಗರದಲ್ಲಿ ಸ್ಲಂ ಮಕ್ಕಳು ಮತ್ತು ಪ್ಲಾಸ್ಟಿಕ್ ಬಾಟಲಿ ಮತ್ತು ಚಿಂದಿ ಆಯುವಂತ ಬಡ ಮಕ್ಕಳೊಂದಿಗೆ ಕೇಕ್ ಕಟ್ ಮಾಡಿ ಸಿಹಿ ಹಂಚಿ ಚಾಕಲೇಟ್ ಕೊಟ್ಟು ಮಕ್ಕಳ ದಿನಾಚರಣೆಯನ್ನು ಆಚರಣೆ ಮಾಡಿದ್ದು ವಿಶೇಷವಾಗಿತ್ತು. ಸಮಾಜ ಸೇವಕ ಮಾರುತಿ ಬಡಿಗೇರ್ ಮಾತನಾಡಿ ಮಕ್ಕಳು ದೇವರ ಸಮ ಇಂತ ಮುಗ್ಧ ಮಕ್ಕಳಲ್ಲಿರುವ ಸಂತಸ ನಿಜಕ್ಕೂ ದೇವರು ಮೆಚ್ಚುವಂತ ಕೆಲಸ ಈ ಮಕ್ಕಳಿಗೆ ಮಕ್ಕಳ ದಿನಾಚರಣೆ ಆಚರಣೆ ಇಲ್ಲ. ಎಷ್ಟು



ಖುಷಿಯಿಂದ ಇಂದು ಮಕ್ಕಳ ದಿನಾಚರಣೆಯನ್ನು ಆಚರಣೆ ಮಾಡಿದ್ದು ಹೆಮ್ಮೆಯ ವಿಷಯ. ದಿನನಿತ್ಯ ಮಕ್ಕಳು ಬೆಳಿಗ್ಗೆ ಎದ್ದು ಪ್ಲಾಸ್ಟಿಕ್ ಚೀಲ ಹಿಡಿದು-ಕೊಂಡು ಚಿಂದಿ ಆರಿಸಿ ತಂದು ಮಾರಾಟ ಮಾಡಿ ಮತ್ತೆ ಸರ್ಕಾರಿ ಶಾಲೆಗೆ ಹೋಗುವಂತ ಇಂಥ ಮುಗ್ಧ ಮಕ್ಕಳ ಜೊತೆ ಮಕ್ಕಳ ದಿನಾಚರಣೆ ವಿಶೇಷವಾಗಿ ಆಚರಣೆ ಮಾಡಿರುವಂತ ರೇಣುಕಾ ಅವರ ಮಾನವೀಯತೆಗೆ ಒಂದು ದೊಡ್ಡ ಸಲಾಂ ಎಂದರು. ಮಕ್ಕಳು ಕುಣಿದು ಕುಪ್ಪಳಿಸಿದರು ಅವರ ಸಂತಸ ಮುಗಿಲು ಮುಟ್ಟಿತು. ಇವರೊಂದಿಗೆ ಭರತ್ ಮತ್ತು ಭಾಗ್ಯ. ಜ್ಯೋತಿ ಹಾಗೂ ಮೌನೇಶ್ ವಡವಾಟಿ ಇದ್ದರು.

# ಮೂರು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಗೆಲುವು: ಸಚಿವೆ ಲಕ್ಷ್ಮೀ ಹೆಬ್ಬಾಳಕರ್

## ಗ್ಯಾರಂಟಿ ಯೋಜನೆಗಳು ಉಪ ಚುನಾವಣೆಯಲ್ಲಿ ಫಲ ನೀಡಲಿವೆ | ಉಪ ಚುನಾವಣೆ ಫಲಿತಾಂಶ ನಾಯಕತ್ವ ಮೇಲೆ ಪರಿಣಾಮ ಬೀರುವುದಿಲ್ಲ

**ಕಲ್ಯಾಣ (ಶಿಗ್ಗಾವಿ) :** ಉಪ ಚುನಾವಣೆಯಲ್ಲಿ ಮೂರು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಜಯ ದಾಖಲಿಸಲಿದ್ದಾರೆ. ಗ್ಯಾರಂಟಿ ಯೋಜನೆಗಳು ಉಪ ಚುನಾವಣೆಯಲ್ಲಿ ಫಲ ನೀಡಲಿವೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಹೇಳಿದ್ದಾರೆ.

ಶಿಗ್ಗಾವಿ-ಸವಣೂರು ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯ ಪ್ರಚಾರದ ವೇಳೆ ಕಲ್ಯಾಣ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಗೆಲುವು ಶತಸಿದ್ಧ ಎಂದರು.

* *ನಾಯಕತ್ವದ ಮೇಲೆ ಪರಿಣಾಮ ಬೀರಲ್ಲ*

ಉಪ ಚುನಾವಣೆಯ ಫಲಿತಾಂಶ ರಾಜ್ಯ ನಾಯಕತ್ವ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ನಮ್ಮ ಸರ್ಕಾರ ಸುಭದ್ರವಾಗಿದೆ. ಯಾವುದೇ ಕಾರಣ-ಕ್ಕೂ ಸರ್ಕಾರವನ್ನು ಅಸ್ಥಿರಗೊಳಿಸಲು



ಸಾಧ್ಯವಿಲ್ಲ ಎಂದು ಹೇಳಿದರು.

* *ಕೋವಿಡ್ ಕಾಲದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ*

ಕೋವಿಡ್ ಕಾಲದಲ್ಲಿ ದೊಡ್ಡಮಟ್ಟದ ಭ್ರಷ್ಟಾಚಾರ ನಡೆದಿದ್ದು, ಇದರ ಬಗ್ಗೆ ಸತ್ಯಾಂಶ ಏನು ಅನ್ನೋದು ಜನರಿಗೆ ಗೊತ್ತಿದೆ. ಕೋವಿಡ್ ಹಗರಣದ ಬಗ್ಗೆ ಜನ ಸಾಮಾನ್ಯರಿಗೂ ಗೊತ್ತಿದೆ. ಸರ್ಕಾರ ಈಗಾಗಲೇ ದಾಖಲೆಗಳನ್ನು ಬಿಡುಗಡೆ ಮಾಡಿದೆ ಎಂದರು.

ಕೋವಿಡ್ ಹಗರಣ ಅಗಿದೆ ಎಂದು ಸ್ವತಃ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರೇ ಹೇಳಿದ್ದಾರೆ. ಹತ್ತು ಸಾವಿರ ಕೋಟಿ ಹಗರಣ ಆಗಿದೆ ಎಂದು ಯತ್ನಾಳ್ ಆರೋಪಿಸಿದ್ದರು. ಈಗ ಮುಂದುವರೆದ ಭಾಗ ಈ ತನಿಖೆ ಅಷ್ಟೆ ಎಂದು ಹೇಳಿದರು.

* *ಗೃಹಲಕ್ಷ್ಮೀ ಬಗ್ಗೆ ಮಹಿಳೆಯರಿಂದ ಧನ್ಯತಾಭಾವ*

ಪಂಚ ಗ್ಯಾರಂಟಿ ಯೋಜನೆಗಳಿಂದ ಉಪ ಚುನಾವಣೆಗೆ ಅನುಕೂಲ ಆಗಲಿದ್ದು, ನಾನು ಹೋದ ಕಡೆಯಲ್ಲೆಲ್ಲಾ ಮಹಿಳೆಯರು ಧನ್ಯತಾಭಾವ ತೋರುತ್ತಿದ್ದಾರೆ ಎಂದು ಹೇಳಿದರು.

ಗೃಹಲಕ್ಷ್ಮೀ ಯೋಜನೆಯಲ್ಲಿ 1 ಕೋಟಿ 28 ಲಕ್ಷ ಜನ ಅರ್ಹರಿದ್ದು, ನೊಂದಣಿ ಮಾಡಿಕೊಂಡಿರುವ 1 ಕೋಟಿ 25 ಲಕ್ಷ ಮಹಿಳೆಯರಿಗೆ ಹಣ ತಲುಪುತ್ತಿದೆ. ಸುಮಾರು 82 ಸಾವಿರ ಮಹಿಳೆಯರಿಗೆ ವಿವಿಧ ಕಾರಣಗಳಿಂದ ಹಣ ಹೋಗಿಲ್ಲ. ಅದರಲ್ಲಿ ನಮ್ಮ ತಪ್ಪಿಲ್ಲ. ಇಂತಹ ಪ್ರಕರಣಗಳಿಗೆ ಹಣ ನೀಡಲು ಸಾಧ್ಯವಿಲ್ಲ ಎಂದು ಈಗಾಗಲೇ ಹಿಂಬರಹ ಬರೆದುಕೊಡಲಾಗಿದೆ ಎಂದರು.

# ಅಖಿಲ ಭಾರತೀಯ ರೈತ ಪಾರ್ಟಿ

## ಹಗರಿಬೊಮ್ಮನಹಳ್ಳಿ ಪದಾಧಿಕಾರಿಗಳ ಆಯ್ಕೆ



**ಎಚ್ ಬಿ ಹಳ್ಳಿ :** ಹಗರಿಬೊಮ್ಮನಹಳ್ಳಿಯಲ್ಲಿ ಅಖಿಲ ಭಾರತೀಯ ರೈತ ಪಾರ್ಟಿ ರಾಜ್ಯ ಅಧ್ಯಕ್ಷರಾದ ಯಶೋದ ಮತ್ತು ಉಪಾಧ್ಯಕ್ಷರಾದ ಶಿವಾನಂದ ಸ್ವಾಮಿ ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಎಂ ಬಸವರಾಜ್ ಇವರ ನೇತೃತ್ವದಲ್ಲಿ ಸಭೆ ನಡೆಸಿ ಹಗರಿಬೊಮ್ಮನಹಳ್ಳಿ ಮಹಿಳಾ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು ಮಂಗಳಾ ಇವರನ್ನು ಅಧ್ಯಕ್ಷರನ್ನಾಗಿ ಹನುಮಂತಮ್ಮ ಇವರು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು ಈ ಸಂದರ್ಭದಲ್ಲಿ ಕೂಡ್ಲಿಗಿ ತಾಲೂಕ ಅಧ್ಯಕ್ಷರಾದ ಚನ್ನಬಸಪ್ಪ ಉಪಾಧ್ಯಕ್ಷರಾದ ವೀರಭದ್ರಪ್ಪ ಮಹಿಳಾ ಕೂಡ್ಲಿಗಿ ತಾಲೂಕ ಅಧ್ಯಕ್ಷರಾದ ಟಿ ಭಾಗ್ಯಮ್ಮ ಉಪಾಧ್ಯಕ್ಷರಾದ ಯಮುನಮ್ಮ ಅಂಬಿಕಾ ಇನ್ನು ಅನೇಕ ಜಿಲ್ಲಾ ಪದಾಧಿಕಾರಿಗಳು ಮತ್ತು ತಾಲೂಕು ಪದಾಧಿಕಾರಿಗಳು ಭಾಗವಹಿಸಿದ್ದರು.

**ವರದಿ : ಎಂ ಪಿ ರಮೇಶ್**

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State